
# ಅಪರಂಜಿ


ತಿಳಿನಗೆಯ ಕಾರಂಜಿ




ಅಕ್ಟೋಬರ್ - 2013



ದಸರಾ ವಿಶೇಷ








ಇದು ಸ್ಯಾಂಪಲ್. ಆರ್ಡರ್ ಆನ್‌ಲೈನ್ ತಗೋತಿನಿ. ಹೇಳಿ.

# ಅಪರಂಜಿ



ತಿಳಿನಗೆಯ ಕಾರಂಜಿ



ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ






ಸಂಪುಟ 31
ಸಂಚಿಕೆ – 1
ಅಕ್ಟೋಬರ್ – 2013


## ಈ ಸಂಚಿಕೆಯಲ್ಲಿ.....

### ದಸರಾ ವಿಶೇಷ


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಹೆದ್ದಾರಿ ನಂಬರ್ ನಾಲ್ಕು | **ವತ್ಸಲ** | 3 |
| ಅಂತರಂಗದಲ್ಲಿ ಹಚ್ಚುವ.... | **ಅ.ರಾ. ಮಿತ್ರ** | 9 |
| ಈ ಸಂಭಾಷಣೆ | **ಬೇಲೂರು ರಾಮಮೂರ್ತಿ** | 12 |
| ವಸ್ತ್ರ ಸಂಹಿತೆಯ ಅಸ್ತ್ರ | **ಕೃಷ್ಣ ಸುಬ್ಬರಾವ್** | 15 |
| ಎಂಥಾ ಗೋಣಗಾಟ!! | **ಸಹನಾ ಪ್ರಸಾದ್** | 18 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 20 |
| ತುಂತುರು | **ದಂನಾಆ** | 23 |
| ಮೋದಿ ಟು ಮೋದಿ | **ಬಿ.ಕೆ. ಗಣೇಶ್** | 24 |
| ಹಿಂದೀ ಚೀನಿ ಪರಾರಿ! | **ಇ.ಆರ್. ರಾಮಚಂದ್ರನ್** | 27 |
| ಗೋವಾ ಹಾಲಿಡೇ | **ಉಷಾ ವಾಸು** | 30 |
| ಬಾವಿಗೆ ಬಿದ್ದಂತಪ್ಪೋ | **ಎಚ್. ಶಾಂತರಾಜ ಐತಾಳ** | 33 |
| ಯಾಕೆ ಮೂರ್ಖನಾದ್ಯೋ | **ಅರುಂಧತಿ ಜೋಶಿ** | 36 |
| ಶುದ್ಧ ಅಸುದ್ದಿ | **ಎಚ್ಚೆನ್ಎ** | 39 |


**ಮುಖಪುಟ ವ್ಯಂಗ್ಯಚಿತ್ರ – ಎಸ್ಸಾರ್**


*ಮುದ್ರಣ :* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ :* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com



ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಪ್ರಧಾನಿ ಪಟ್ಟಕ್ಕೆ ರಾಹುಲ್ ಸೂಕ್ತ – ಪ್ರಧಾನಿ ಮನ್‌ಮೋಹನ್ ಸಿಂಗ್

**● ಸಿಂಗ್ ಅವರ ಸಾಂಗ್ ಬೇಗ ಬದಲಾಗಲಿ !!**

★★★

''ಹಣದ ಬೆನ್ನು ಹತ್ತಬೇಡಿ'' – ಶ್ರೀ ಕಾಯ್ಕಿಣಿ ಸಲಹೆ

**● ನಾನೆಂದೂ ಹಾಗೆ ಮಾಡಿಲ್ಲ ಎಂದು ಅಪರಂಜಿ ನಕ್ಕಳಂತೆ !!**

★★★

ಗ್ರಾಹಕರಿಗೆ ಮೋಸ; ಖಾಸಗೀ ಕಂಪನಿ ಮೊಸರು ಪ್ಯಾಕೆಟ್ ವಶ – ಸುದ್ದಿ

**● ಗ್ರಾಹಕರು ಮೋಸ – ಹೋದರು !!**

★★★

''ಅಂಬರ ಚುಂಬಿಸಿದ ಅಪರಂಜಿ'' – ವಾಣಿಜ್ಯ ಸುದ್ದಿ

**● ಅಪರಂಜಿ ನಸು ನಕ್ಕಳಂತೆ !!**

★★★

''ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿ ಮೀರಿತ್ತು'' – ಹೇಳಿಕೆ

**● ಇದರಲ್ಲಿ ''ಮಿತಿ'' ಬೇರೇ ಇದೆಯೋ !!**

★★★

ಅಕ್ರಮ ಕಲ್ಲು ಗಣಿಗಾರಿಕೆ; ಸ್ಥಳಕ್ಕೆ ಅಧಿಕಾರಿಗಳ ಭೇಟಿ – ಪತ್ರಿಕೆ

**● ಕೋಟೆ ಸೂರೆ ಹೋದಮೇಲೆ................ !!**

★★★

ರಾಜಭವನದಲ್ಲಿ ಇಲಿ, ಹೆಗ್ಗಣ – ಹೇಳಿಕೆ

**● ಛೇ, ಛೇ ಅವರೇ ಹೀಗೆ ಹೇಳಬಾರದು !!**

★★★

ಈಗಿನ ಆರ್ಥಿಕ ಬಿಕ್ಕಟ್ಟು ತಾತ್ಕಾಲಿಕ – ಪ್ರಧಾನಿ

**● ಈ ಆಶ್ವಾಸನೆಗಳಿಂದಲೇ ನಮಗೆ ಭಯ !!**

★★★



# ಹೆದ್ದಾರಿ ನಂಬರ್ ನಾಲ್ಕು

**- ವತ್ಸನ**

**ಕ**ಳೆದ ಎರಡು ತಿಂಗಳು ನಮ್ಮ ಫ್ಲಾಟ್‌ನಲ್ಲಿ ನಾನೊಬ್ಬನೇ ಇರಬೇಕಾಗಿ ಬಂದಿತ್ತು. ಶರಲೇಖ ಉತ್ತರಖಾಂಡ್ ಸರ್ಕಾರದ ಆಹ್ವಾನವನ್ನು ಮನ್ನಿಸಿ ಅಲ್ಲಿಗೆ ಪ್ರಯಾಣ ಬೆಳೆಸಿದ್ದ. ಮೂರು ವಾರಗಳು ಎಂಬ ಹಂಚಿಕೆಯಿಂದ ಪ್ರಾರಂಭವಾದ ಪ್ರವಾಸ, ಅಲ್ಲಿನ ಅನಾಹುತಗಳ ಸರಣಿಯ ದೆಸೆಯಿಂದ ಮುಂದಕ್ಕೆ ಹೋಗುತ್ತಲೇ ಇತ್ತು. ಕೊನೆಗೆ ಮೊನ್ನೆ ಬೆಳಗ್ಗೆ ತಿಂಡಿಗೆ ಕೂತಾಗ ಅವನು ಪ್ರತ್ಯಕ್ಷನಾದದ್ದು ನೋಡಿ ನಿಜಕ್ಕೂ ಬಹು ಸಂತೋಷವೇ ಆಯಿತು.

''ಕೇದಾರನಾಥ್ ಪರಿಸ್ಥಿತಿ ಹೇಗಿದೆ? ತಹಬಂದಿಗೆ ಬರೋ ಲಕ್ಷಣಗಳು ಕಾಣಿಸುತ್ವೇ?'' ಅಂತ ಕೇಳಿದೆ.

ಶರಲೇಖನ ಮುಖದಲ್ಲಿ ಒಂದು ವಿಷಾದದ ನಗೆ ಹಾದುಹೋಯಿತು. ''ನಮ್ಮ ದೇಶದ ನಾಯಕರುಗಳು ದೇಶದ ಮೇಲಿನ ನಿಯಂತ್ರಣ ಇರ್ಲಿ, ತಮ್ಮ ನಡವಳಿಕೆ ಮೇಲಿನ ನಿಯಂತ್ರಣ ಕೂಡ ಕಳೆದುಕೊಂಡು ಬಿಟ್ಟಿರೋವಾಗ ಇಂತಹ ಒಂದು ದುರ್ಘಟನೆ, ನಮ್ಮ ಶಿಸ್ತು ಸಂಯಮಗಳನ್ನು ಪ್ರದರ್ಶಿಸೋ ಬದಲಿಗೆ ನಮ್ಮಲ್ಲಿ ಎಲ್ಲೆಲ್ಲೂ ತಾಂಡವವಾಡ್ತಿರೋ ಅರಾಜಕತೆಗೆ ಚೆನ್ನಾಗಿ ಕನ್ನಡಿ ಹಿಡೀತಾ ಇರೋದನ್ನ ನೋಡಿಕೊಂಡು ಬಂದೆ'' ಅಂತ ಹೇಳಿ ಸ್ನಾನಕ್ಕೆ ಹೋದ. ಅಷ್ಟರಲ್ಲಿ ಫೋನ್ ರಿಂಗಾಯಿತು. ಆ ಬದಿಯಿಂದ ಶೀಲು ಮಾತನಾಡುತ್ತಿದ್ದಳು. ''ಮಾವ, ಬರೋ ಸೋಮವಾರ ನಮ್ಮ ಪ್ರದೀಪನ ಮದುವೆ. ಜ್ಞಾಪಿಸುಕ್ಕೆ ಫೋನ್ ಮಾಡ್ತಾ ಇದೀನಿ. ಕಾರ್ಡ್ ಆಗಲೇ ಬಂದಿರಬೇಕಲ್ಲಾ, ನಿಮ್ಮ ಗೆಳೆಯ ಊರಿಗೆ ಹಿಂತಿರುಗಿದ್ರೆ ಖಂಡಿತಾ ಅವರನ್ನೂ ಕರೆತನ್ನಿ. ಅವರಿಗೂ ಒಂದು ಛೇಂಜ್ ಇರುತ್ತೆ'' ಅಂತ ಹೇಳಿ ನನ್ನ ಭರವಸೆ ತೊಗೊಂಡು ಮಾತು ಮುಗಿಸಿದಳು. ಆಮೇಲೆ ಶರಲೇಖ ಬಿಡುವಾದಾಗ ಅವನನ್ನು ನನ್ನ ಜೊತೆಗೆ ಮದುವೆಗೆ ಬಂದು ಮದುಮಕ್ಕಳನ್ನು ಆಶೀರ್ವದಿಸುವುದಕ್ಕೆ ಒಪ್ಪಿಸಿದೆ. ಕಾರ್ಡಿನಲ್ಲಿ ಹೇಗಿದ್ದರೂ ''ಬಂಧು, ಮಿತ್ರರೊಡನೆ'' ಅಂತ ಅಚ್ಚಿಸಿತ್ತಲ್ಲಾ!

ಮದುವೆ ಇದ್ದದ್ದು ಚಿತ್ರದುರ್ಗದಲ್ಲಿ, ಹಾಗಾಗಿ ಭಾನುವಾರ ಮಧ್ಯಾಹ್ನ ವೋಲ್ವೋ ಹಿಡಿದು ದುರ್ಗದ ದಾರಿ ಹಿಡಿದೆವು. ಊರು ಸೇರಿದಾಗ ಸಂಜೆ ಆಗಿತ್ತು. ಆಟೋ ಹಿಡಿದು ಅಹಮದ್ ಷಾ ವಾಲಿ ದರ್ಗಾ ರಸ್ತೆಯಲ್ಲಿ ಇದ್ದ ಆದರ್ಶ್ ಕಲ್ಯಾಣ ಮಂಟಪ ಹುಡುಕಿಕೊಂಡು ಹೊರಟೆವು. ಕರ್ನಾಟಕದ ಯಾವುದೇ ಮೂಲೆಗೆ ಹೋಗಲಿ, ದಾರಿಯಲ್ಲಿ

ಸಿಕ್ಕ ಯಾರನ್ನಾದರೂ ನಿಲ್ಲಿಸಿ ಯಾವುದಾದರೊಂದು ಜಾಗಕ್ಕೆ ದಾರಿ ಕೇಳಿದರೆ ನಿಮಗೆ ಸಿಗುವ ಉತ್ತರದ ಮೊದಲ ವಾಕ್ಯ ಯಾವಾಗಲೂ ಒಂದೇ ಆಗಿರುತ್ತದೆ. ನಮ್ಮ ಅನುಭವವೂ ಇದಕ್ಕೆ ಹೊರತಾಗಲಿಲ್ಲ. ನಾವು ಕೇಳಿದಾತ, ''ಒಂದು ಕೆಲ್ಸ ಮಾಡಿ'' ಅಂತ ಪ್ರಾರಂಭಿಸಿ ನಮ್ಮ ಆಟೋ ಡ್ರೈವರಿಗೆ ವಿವರವಾದ ಡೈರೆಕ್ಷನ್‌ಗಳನ್ನು ತಿಳಿಸಿದ. ಅವನ ಮಾತುಗಳು ಆತ್ಮವಿಶ್ವಾಸದಿಂದ ತುಂಬಿದ್ದವು. ಊರಿನ ಸಂದುಗೊಂದುಗಳಲ್ಲಿ ತಿರುಗಿ ಕೊನೆಗೆ ನಮ್ಮ ಮಾರ್ಗದರ್ಶಿ ತಿಳಿಸಿದ ಜಾಗ ಸೇರಿದೆವು. ''ಅಹಮದ್ ಷಾ ವಾಲಿ ದರ್ಗಾ'' ಎಂಬ ಫಲಕ ನಮ್ಮ ಕಣ್ಣಮುಂದೆ ರಾರಾಜಿಸುತ್ತಿತ್ತು. ನಮ್ಮ ಮಿತ್ರ ನಮಗೆ ದಾರಿ ತಿಳಿಸುವ ಭರಾಟೆಯಲ್ಲಿ ಆದರ್ಶ್ ಕಲ್ಯಾಣ ಮಂಟಪ ಅಂತ ನಾವು ಹೇಳಿದ್ದನ್ನ ಕೇಳಿಸಿಕೊಂಡೇ ಇರಲಿಲ್ಲ. ಸರಿ, ''ಈ ಬೀದಿಯಲ್ಲಿ ಯಾವುದಾದರೊಂದು ಕಲ್ಯಾಣ ಮಂಟಪ ತಳಿರು ತೋರಣಗಳಿಂದ, ಸರಣಿ ದೀಪಗಳಿಂದ ಕಂಗೊಳಿಸುತ್ತಿದ್ದರೆ ಅಲ್ಲಿ ನಿಲ್ಲಿಸು'' ಅಂತ ಶರಲೇಖ ನಮ್ಮ ಚಾಲಕನಿಗೆ ಹೇಳಿದ ಸ್ವಲ್ಪ ಹೊತ್ತಿನಲ್ಲೇ ನಾವು ಮದುವೆ ಮಂಟಪದಲ್ಲಿದ್ದೆವು. ಶೀಲು ಮತ್ತು ಅವಳ ಗಂಡ ರಮೇಶ್ ನನ್ನನ್ನು ಮತ್ತು ನನಗಿಂತ ಹೆಚ್ಚಾಗಿ ಶರಲೇಖನನ್ನು ಬಹು ಆದರದಿಂದ ಬರಮಾಡಿಕೊಂಡರು. ವರಪೂಜೆಯ ನಂತರ ಬೀಗರ ಪರಿಚಯ ಆಯಿತು. ಮದುವಣಗಿತ್ತಿ ಊರಿನ ಖ್ಯಾತ ಕಂಟ್ರಾಕ್ಟರ್ ವೆಂಕಟಗಿರಿ ಗೌಡರ ಮಗಳು ಸುರೇಖಾ. ಫ್ಲಾರಿಡಾದಲ್ಲಿ ತನ್ನದೇ ಒಂದು ಹೋಟೆಲ್ ನಡೆಸುತ್ತಿದ್ದಾಳಂತೆ. ಪ್ರದೀಪ್ ಫ್ಲಾರಿಡಾಕ್ಕೆ ಕೆಲಸದ ಮೇಲೆ ಹೋಗಿದ್ದಾಗ ಪರಸ್ಪರ ಭೇಟಿ ಆಗಿ, ಅನಂತರ ಅದು ಸ್ನೇಹಕ್ಕೆ ತಿರುಗಿ ಈಗ ಅನುರಾಗದ ಮಟ್ಟಕ್ಕೆ ಬಂದಿದೆಯಂತೆ. (ಮದುವೆಯ ನಂತರ ಮುಂದಿನ ಮಜಲುಗಳಾದ ನ್ಯಾಗಿಂಗ್, ಭ್ರಮನಿರಸನ, ಮೈ ಉರಿ ಇವನ್ನೆಲ್ಲಾ ನೋಡಬಹುದು ಎಂದು ಶರಲೇಖ ಆಮೇಲೆ ಕುಹಕವಾಡಿದ) ಅಂತೂ ಒಳ್ಳೇ ವರಸಾಮ್ಯ, ನಮಗೆ ಭರ್ಜರಿ ಔತಣ.

ಮಾರನೆಯ ಬೆಳಗ್ಗೆ ಧಾರೆ ವಧುವಿನ ಸಂಪ್ರದಾಯದಂತೆ ಸಾಂಗವಾಗಿ ನೆರವೇರಿತು. ಧಾರೆ ಊಟ ಮುಗಿದ ನಂತರ ನಾನು ವೆಂಕಟಗಿರಿ ಗೌಡರೊಂದಿಗೆ ಲೋಕಾಭಿರಾಮವಾಗಿ ಮಾತನಾಡುತ್ತಾ ನಾವು ಆ ಮಧ್ಯಾಹ್ನವೇ ಬೆಂಗಳೂರಿಗೆ ಹಿಂತಿರುಗಬೇಕಾಗಿದ್ದನ್ನೂ ಪ್ರಸ್ತಾಪ ಮಾಡಿದೆ. ಅವರು, ''ಹಾಗೇನು? ಹಾಗಾದರೆ ನನ್ನ ತಂಗಿ ಮಗ ಶರಣ್ ಜೊತೆ ಅವನ ಕಾರಿನಲ್ಲೇ ಹೋಗಬಹುದಲ್ಲಾ, ಇಲ್ಲೇ ಇದಾನೆ ಅವನು. ಒಂದು ನಿಮಿಷ ಅವನನ್ನೇ ಕೇಳಿಬಿಡೋಣ'' ಅಂತ ಹೇಳಿ ದೂರದಲ್ಲಿ ನಿಂತು ಹರಟುತ್ತಿದ್ದ ಒಬ್ಬ ಯುವಕನನ್ನು ಬಳಿಗೆ ಕರೆದರು. ಪರಸ್ಪರ ಪರಿಚಯಗಳಾದನಂತರ ಆತ ಬಹು ವಿಶ್ವಾಸದಿಂದ ''ಖಂಡಿತ ನನ್ನ ಜೊತೆಯಲ್ಲಿ ಬನ್ನಿ. ನಿಮ್ಮನ್ನು ಕರೆದೊಯ್ಯುವುದು ನನ್ನ ಭಾಗ್ಯ. ಸರಿಯಾಗಿ ನಾಲ್ಕು ಗಂಟೆಗೆ ನಿಮ್ಮನ್ನು ಇಲ್ಲಿಂದ ಪಿಕ್ ಮಾಡುತ್ತೇನೆ'' ಅಂತ ಹೇಳಿ ಹೋದ.

ಶರಣ್‌ನ ಬರುವಿಕೆಯನ್ನು ಕಾಯುತ್ತಿರುವಾಗ ಶರಲೇಖ ನನ್ನನ್ನು ಕುರಿತು ''ಈ ಶರಣ್ ಬಗ್ಗೆ ನೀನು ಸೂಕ್ಷ್ಮವಾಗಿ ಗಮನಿಸಿದೆಯಾ?'' ಅಂತ ಕೇಳಿದ. ನಾನು, ''ಸುಮಾರು ಮೂವತ್ತರ ಯುವಕ, ಬುದ್ಧಿವಂತನ ತರಹ ಕಾಣುತ್ತಾನೆ. ಸ್ವಲ್ಪ ಷೋಕಿಲಾಲ ಅಂತ

ಕಾಣುತ್ತೆ. ಬಲಗಿವಿಗೆ ಅವನು ಹಾಕಿಕೊಂಡಿದ್ದ ಹತ್ತಕಡಕು ನೋಡಿದೆಯಾ?'' ಅಂದೆ. ಶರಲೇಖ, ''ಅವನ ಮೇಲೆ ಯಾವುದೋ ಗುರುತರ ಜವಾಬ್ದಾರಿ ಇರೋಹಾಗೆ ಕಾಣುತ್ತೆ. ಏನು ಅಂತ ತಿಳೀತಾ ಇಲ್ಲ. ಹೇಗಿದ್ದರೂ ಮೂರು ಗಂಟೆಗಳ ಕಾಲ ಅವನೊಂದಿಗೇ ಪ್ರಯಾಣ ಮಾಡ್ತೀವಲ್ಲಾ. ಆಗ ಪತ್ತೆ ಹಚ್ಚಬಹುದು. ನನ್ನ ಮನಸ್ಸಿಗೂ ಒಂದಿಷ್ಟು ಕಸರತ್ತು ಸಿಗುತ್ತೆ'' ಎಂದ. ನಾಲ್ಕು ಗಂಟೆಗೆ ಸರಿಯಾಗಿ ಶರಣ್ ತನ್ನ ಕಾರಿನಲ್ಲಿ ಬಂದಿಳಿದ. ಬೆಳಗಿನ ಟೀ ಷರ್ಟ್ ಜೀನ್ಸ್ ಬದಲಿಸಿ ಈಗ ಜರತಾರಿ ಪಂಚೆ, ಸಿಲ್ಕ್ ಜುಬ್ಬಾ ಧರಿಸಿದ್ದ ಶರಣ್. ''ಪ್ರಯಾಣದಲ್ಲಿ ಆರಾಮವಾಗಿರುತ್ತೆ ಅಂತ ಈ ಪಂಚೆ ಜುಬ್ಬಾ, ಬನ್ನಿ ಹೊರಡೋಣ'' ಅಂತ ಹೇಳಿ ಶರಲೇಖನ ಕೈಚೀಲವನ್ನು ಬಲವಂತದಿಂದ ಅವನಿಂದ ಕಸಿದುಕೊಂಡು ಕಾರಿನ ಹಿಂದಿನ ಸೀಟಿನಲ್ಲಿ ಇರಿಸಿದ. ಶರಲೇಖ ಚಾಲಕನ ಪಕ್ಕದ ಸೀಟಿನಲ್ಲಿ ಕುಳಿತ. ನಾನು ಹಿಂದಿನ ಸೀಟನ್ನು ಏರಿದೆ. ರಥ ಬೆಂಗಳೂರಿನತ್ತ ಹೆದ್ದಾರಿ ನಾಲ್ಕರಲ್ಲಿ ವೇಗದಿಂದ ಹೊರಟಿತು.

ಶರಣ್ ಬಗ್ಗೆ ನಮಗಿದ್ದ ಸಂಶಯವೆಲ್ಲಾ ಮೊದಲ ಅರ್ಧ ಗಂಟೆಯ ಮಾತುಕತೆಯಲ್ಲಿ ಗಾಳಿಗೆ ತೂರಿಹೋಯಿತು. ಬಹು ಮಾತುಗಾರ ಶರಣ್. ಲೋಕ ವ್ಯವಹಾರಗಳ ಬಗ್ಗೆ ಅಗಾಧವಾದ ಮಾಹಿತಿ ಸಂಗ್ರಹಿಸಿದ್ದ ಆತ. ಶರಲೇಖನ ಪರಿಚಯವಾದ ಮೇಲೆ ಅವನ ಪತ್ತೇದಾರಿ ಕೆಲಸಗಳಲ್ಲಿ ಅತೀವ ಮೆಚ್ಚುಗೆ ತೋರಿಸಿದ. ಸಿರಾ ಹತ್ತಿರ ಬರುತ್ತಿದ್ದ ಹಾಗೆ ಯಾಕೋ ಅವನ ಮಾತುಕತೆ ಕಡಿಮೆಯಾಗುತ್ತಾ ಹೋಯಿತು. ಒಮ್ಮೆಲೇ ಅವನು, ''ಸಿರಾದಲ್ಲಿ ನನ್ನ ಗೆಳೆಯನೊಬ್ಬನ ಚಿಕ್ಕಮ್ಮ ಇದ್ದಾರೆ. ಬೆಳಗ್ಗೆ ನಿಮ್ಮೊಡನೆ ಮಾತನಾಡಿದ ನಂತರ ನನ್ನ ಗೆಳೆಯ ನನಗೆ ಫೋನ್ ಮಾಡಿ ಅವರನ್ನು ಬೆಂಗಳೂರಿಗೆ ಕರೆತರಲಾಗುವುದೇ?'' ಅಂತ ಕೇಳಿದ. ನನಗೆ ಇಲ್ಲ ಅನ್ನುಕ್ಕಾಗಲಿಲ್ಲ. ತಮ್ಮದೇನೂ ಅಭ್ಯಂತರ ಇಲ್ಲ ತಾನೆ ? ಅಂತ ಬಹು ಸಂಕೋಚದಿಂದ, ಕ್ಷಮೆ ಕೋರುವ ರೀತಿಯಲ್ಲಿ ಕೇಳಿದ. ಶರಲೇಖ, ''ಅಗತ್ಯವಾಗಿ. ಹೇಗಿದ್ದರೂ ಕಾರಿನಲ್ಲಿ ಬೇಕಾದಷ್ಟು ಜಾಗ ಇದೆಯಲ್ಲಾ'' ಅಂತ ಹೇಳಿದ. ಕಾರು ಹೈವೇ ಬಿಟ್ಟು ಊರೊಳಗಿರುವ ಪ್ರವಾಸಿ ಬಂಗಲೆಯತ್ತ ಹೊರಟಿತು. ''ಗಿರಿಜಮ್ಮನವರಿಗೆ ಅಲ್ಲಿ ಕಾದಿರಲು ಹೇಳಿದ್ದೆ. ಅವರ ಮನೆಗೆ ಹೋಗಿ ಬರೋ ಸಮಯ ಉಳಿತಾಯವಾಗುತ್ತಲ್ಲ'' ಅಂತ ನಾವು ಕೇಳದ ಪ್ರಶ್ನೆಗೆ ಅನಗತ್ಯ ಉತ್ತರ ಹೇಳುತ್ತಾ ಶರಣ್ ಪ್ರವಾಸಿ ಬಂಗಲೆಯ ಬಳಿ ಕಾರನ್ನು ನಿಲ್ಲಿಸಿದ. ನಾವೆಲ್ಲರೂ ಕಾರಿನಿಂದ ಇಳಿದೆವು.

ಗಿರಿಜಮ್ಮ ಬಂದು ಕಾರಿನ ಮುಂದಿನ ಸೀಟಿನಲ್ಲಿ ಕುಳಿತರು. ಸುಮಾರು ಐವತ್ತು ವಯಸ್ಸಿನ ಆಕೆ ಬಹಳ ಸಂಪ್ರದಾಯದವರಂತೆ ಕಂಡರು. ಹಿರಿಯ ಮಹಿಳೆಯರು ಉಡುವ ಧರ್ಮಾವರದ ಸೀರೆ, ಅಗಲವಾದ ಕುಂಕುಮ, ಅರ್ಧ ನರೆತ ಕೂದಲು. ಬಹು ಸಂಕೋಚದಿಂದ ನಡೆದು ಬಂದು ನಮ್ಮನ್ನು ನೇರವಾಗಿ ನೋಡದೆ, ಮುಂದಿನ ಸೀಟಿನಲ್ಲಿ ಮುದುಡಿ ಕುಳಿತದ್ದನ್ನು ನೋಡಿದರೆ ಈಕೆ ಒಂದು ತಲೆಮಾರಿನ ಹಿಂದಿನವರಂತೆ ಕಂಡರು.

ಅವರ ಕೈಯ್ಯಲ್ಲಿ ಒಂದು ಮುಚ್ಚಳವಿದ್ದ ಬೆತ್ತದ ಬುಟ್ಟಿ. ''ಓಹೋ ಈಗಿನ ಕಾಲದ ತರುಣಿಯರ ವ್ಯಾನಿಟಿ ಬ್ಯಾಗ್ ಬದಲು ಈಕೆ ಇದನ್ನ ಬಳಸಿದ್ದಾರೆ'' ಅಂತ ಅಂದುಕೊಂಡೆ.

ಕಾರು ಮುಂದೆ ಸಾಗಿತು. ಶರಣ್ ನಮ್ಮನ್ನೆಲ್ಲಾ ಪರಸ್ಪರ ಪರಿಚಯ ಮಾಡಿಸಿದ. ಆಕೆ ಮಿತ ಭಾಷಿ. ನಮಗೂ ಮಾತನಾಡುವ ಅಗತ್ಯ ಇರಲಿಲ್ಲ. ನಮ್ಮ ಯಾತ್ರೆ ಮೌನದಿಂದ ಸಾಗಿತು.

ಸಿರಾದಿಂದ ತುಮಕೂರಿಗೆ ಹೋಗುವ ಮಾರ್ಗದಲ್ಲಿ ಸೀಬಿ ನರಸಿಂಹಸ್ವಾಮಿ ಕ್ಷೇತ್ರ ಇದೆ. ಅಲ್ಲಿ ಸೀಬಿ ಅಗ್ರಹಾರ ಎಂಬ ಸಣ್ಣ ಊರೂ ಬಹುಕಾಲದಿಂದ ಇದೆ. ಸುಮಾರು ಈ ಸ್ಥಳದ ಆಸುಪಾಸಿನಲ್ಲಿ ಬರುತ್ತಿರುವಾಗ ಒಂದು ಪೋಲೀಸ್ ಜೀಪ್ ಬಹು ವೇಗದಿಂದ ನಮ್ಮನ್ನು ಓವರ್ ಟೇಕ್ ಮಾಡಿ ನಮ್ಮ ಕಾರಿಗಡ್ಡವಾಗಿ ನಿಂತಿತು. ಶರಣ್ ಬಹು ಚುರುಕಾಗಿ ಕಾರನ್ನು ಬ್ರೇಕ್ ಹಾಕಿ ನಿಲ್ಲಿಸಿ ರಸ್ತೆ ಎಡಬದಿಯಲ್ಲಿ ನಿಲ್ಲಿಸಿದ. ಅನಂತರ ನಮ್ಮನ್ನು ಕುರಿತು, ''ಅವರದ್ದೇನೇ ತಕರಾರಿದ್ದರೂ ನಾನೇ ಅದನ್ನ ನಿಭಾಯಿಸುತ್ತೇನೆ. ದಯವಿಟ್ಟು ನೀವು ಮೌನದಿಂದಿರಿ'' ಅಂತ ವಿನಂತಿಸಿಕೊಳ್ಳುವ ಹೊತ್ತಿಗೆ ಒಬ್ಬ ಪೋಲೀಸ್ ಇನ್‌ಸ್ಪೆಕ್ಟರ್ ಜೀಪಿನಿಂದ ಇಳಿದು ನೇರವಾಗಿ ಶರಣ್ ಕಿಟಕಿಯ ಬಳಿಬಂದು. ''ಏಮಿರಾ, ತಾಗೇಸಿ ವಚ್ಚಿನಾವಾ?'' ಅಂತ ತೆಲುಗಿನಲ್ಲಿ ಕೇಳಿದ. ನಾನು ಶರಲೇಖನ ಕಡೆ ಪ್ರಶ್ನಾರ್ಥಕವಾಗಿ ನೋಡಿದೆ. ಅವನು ''ಕಾರು ಆಂಧ್ರ ರಿಜಿಸ್ಟ್ರೇಷನ್'' ಅಂತ ಪಿಸುಗುಟ್ಟಿದ. ಶರಣ್ ಬಹು ಸಮಾಧಾನದಿಂದ ತೆಲುಗಿನಲ್ಲೇ ಉತ್ತರಿಸಿದ. ಓದುಗರ ಅನುಕೂಲಕ್ಕೆಂದು ಅವರ ಸಂಭಾಷಣೆಯನ್ನು ಇಲ್ಲಿ ಕನ್ನಡದಲ್ಲೇ ಕೊಟ್ಟಿದ್ದೇನೆ.

''ಸ್ವಾಮಿ, ನಾನೇನು ಕುಡಿದಿಲ್ಲ. ನನ್ನ ಪಾಡಿಗೆ ನಾನು ಚಿತ್ರದುರ್ಗದಿಂದ ಬೆಂಗಳೂರಿಗೆ ಹೋಗುತ್ತಿದ್ದೇನೆ. ನನ್ನನ್ನು ನಿಲ್ಲಿಸಿರುವ ಕಾರಣವಾದರೂ ಏನು?'' ಅಂದ ಶರಣ್.

''ಮತ್ತೆ ಓವರ್ ಸ್ಪೀಡ್ ಯಾಕೆ ಮಾಡ್ತಾ ಇದ್ದೆ? ಪಕ್ಕದಲ್ಲಿರೋರು ಯಾರು? ಸುಳ್ಳು ಬೊಗಳ ಬೇಡ'' ಅಂದ ಆ ಇನ್‌ಸ್ಪೆಕ್ಟರ್.

''ಅವರು ನನ್ನ ಚಿಕ್ಕಮ್ಮ. ಹಿಂದೆ ಕೂತಿರೋರು ನನ್ನ ಪರಿಚಿತರು. ಬೆಂಗಳೂರಿಗೆ ಲಿಫ್ಟ್ ಕೇಳಿದ್ದರು. ನನ್ನ ಸ್ಪೀಡ್ ಎಂಭತ್ತು ಕಿಲೋಮೀಟರ್‌ಗೆ ಕಡಿಮೆಯೇ ಇತ್ತು. ನೀವು ನನ್ನನ್ನ ವಿನಾಕಾರಣ ನಿಲ್ಲಿಸಿದ್ದೀರಿ'' ಅಂತ ಶರಣ್ ಶಾಂತವಾಗಿಯೇ ಉತ್ತರಿಸಿದ. ಅಷ್ಟು ಹೊತ್ತಿಗೆ ಜೀಪಿನಲ್ಲಿದ್ದ ಇನ್ನೊಬ್ಬ ಆಫೀಸರ್ ಬಂದು ಅನಾಮತ್ತಾಗಿ ಕಾರಿನ ಕಿಟಕಿಯಲ್ಲಿ ಕೈ ತೂರಿಸಿ ನಮ್ಮ ಕಾರಿನ ಬೀಗದ ಕೈಯ್ಯನ್ನು ತೆಗೆದು ತನ್ನ ಜೇಬಿನಲ್ಲಿರಿಸಿಕೊಂಡ. ಮೊದಲಿನ ಆಫೀಸರ್, ''ನೀನು ನೂರು ಕಿ.ಮೀ. ವೇಗದಲ್ಲಿ ಓಡಿಸುತ್ತಿದ್ದನ್ನು ನಮ್ಮ ಕ್ಯಾಮೆರಾ ದಾಖಲಿಸಿದೆ. ಈಗ ನಮ್ಮ ಜೊತೆ ಪೋಲೀಸ್ ಠಾಣೆಗೆ ಬರಬೇಕಾಗುತ್ತೆ. ಅಲ್ಲಿ ಎಫ್.ಐ.ಆರ್. ಮಾಡಿದ ನಂತರವೇ ಮುಂದಿನ ವಿಷಯ'' ಅಂದ.

ನನಗೋ ಗಾಬರಿ. ಶರಲೇಖ ಶಾಂತನಾಗಿ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸುತ್ತಿದ್ದ.

ಶರಣ್, ಮೊದಲಿನ ಆಫೀಸರ್ ಅನ್ನು ಕುರಿತು, ''ನಾವು ಬೆಂಗಳೂರಿಗೆ ಅರ್ಜೆಂಟಾಗಿ ತಲುಪಬೇಕು. ನಿಮ್ಮ ಜೊತೆಗೆ ಠಾಣೆಗೆ ಬರೋದು ಅಂದರೆ ಇವತ್ತೇ ನಾವು ಊರು

ಸೇರೋಕ್ಕೇ ಆಗೋದಿಲ್ಲ. ಅಲ್ಲದೇ ನಾವೇನೂ ತಪ್ಪು ಮಾಡಿಲ್ಲ. ನಾವೇಕೆ ಠಾಣೆಗೆ ಬರಬೇಕು? ನನ್ನ ಕಾರ್ ಕೀ ಕೊಟ್ಟುಬಿಡಿ. ನಮ್ಮ ಪಾಡಿಗೆ ನಾವು ಹೊರಟು ಹೋಗುತ್ತೇವೆ'' ಎಂದು ವಿನಂತಿಸಿಕೊಂಡ.

ಅವರಿಬ್ಬರೂ ನಗುಕ್ಕೆ ಪ್ರಾರಂಭಿಸಿದರು. ''ಕಾರ್ ಕೀ ಕೊಟ್ಟುಬಿಡೋಕ್ಕೆ ಅದು ನಿಮ್ಮಪ್ಪನ ಮನೆ ಗಂಟಾ? ಹೆಚ್ಚು ಮಾತನಾಡಿದರೆ ನಮ್ಮ ಜೀಪನ್ನ ನಿಮ್ಮ ಕಾರಿಗೆ ಢಿಕ್ಕಿ ಹೊಡಿಸಿ ನೀವೇ ನಮ್ಮ ಕರ್ತವ್ಯ ಮಾಡುತ್ತಿದ್ದಾಗ ಅಡಚಣೆ ತಂದಿರಿ ಅಂತ ದೂರು ದಾಖಲು ಮಾಡ್ತೇವೆ. ಅದಕ್ಕೆ ಕನಿಷ್ಠ ಎರಡು ವರ್ಷ ಸಜೆ'' ಅಂದ ಆಫೀಸರ್ ನಂಬರ್ ಒನ್.

ಶರಣ್ ಕಂಗಾಲಾದ ಹಾಗೆ ಕಾಣಿಸಿತು. ''ಈಗೇನು ಮಾಡಬೇಕು ಅಂತೀರಾ ಆಫೀಸರ್?'' ಅಂತ ದೈನ್ಯದಿಂದ ಕೇಳಿದ.

''ಒಂದು ಐದು ಸಾವಿರ ರೂಪಾಯಿ ಕೊಟ್ಟುಬಿಡು. ಈ ಬಾರಿ ಬಿಟ್ಟು ಬಿಡ್ತೇವೆ'' ಅಂದ ಅವನು.

ಗಿರಿಜಮ್ಮ ''ಅವರು ಕೇಳಿದ್ದನ್ನ ಕೊಟ್ಟುಬಿಡಪ್ಪಾ. ಈಗಾಗಲೇ ರಾತ್ರಿ. ಹೆಣ್ಣು ಹೆಂಗಸು ನಾನು. ಹೆದರಿಕೆ ಆಗ್ತಾ ಇದೆ'' ಅಂತ ಅಲವತ್ತುಕೊಂಡರು.

ಶರಣ್ ತನ್ನ ಪರ್ಸನ್ನು ತೆಗೆದು ಹಣ ಎಣಿಸಿದ ಮೂರು ಸಾವಿರ ಚಿಲ್ಲರೆ ಇತ್ತು. ''ಗಿರಿಜಮ್ಮ ನಿಮ್ಮ ಹತ್ತಿರ ಎಷ್ಟು ಹಣ ಇದೆ?'' ಅಂತ ಕೇಳಿದ ಶರಣ್. ಅವರು ತಮ್ಮ ಸೊಂಟದಲ್ಲಿದ್ದ ಚೀಲದಿಂದ ಮೂರು ಸಾವಿರ ರೂಪಾಯಿ ತೆಗೆದು ಶರಣ್‌ಗೆ ನೀಡಿದರು. ಅವನು ಹಣವನ್ನು ಮೊದಲ ಆಫೀಸರ್‌ಗೆ ಕೊಟ್ಟ, ಕಾರಿನ ಕೀ ಅವನಿಗೆ ಹಿಂತಿರುಗಿತು. ಒಡನೆಯೇ ಕಾರು ತುಮಕೂರಿನತ್ತ ವೇಗದಿಂದ ಹೊರಟಿತು.

ತುಮಕೂರಿನ ಬೈಪಾಸ್ ಬಳಿಯ ಕಾಮತ್ ಸೇರುವವರೆಗೂ ಯಾರೂ ಮಾತನಾಡಲಿಲ್ಲ. ಎಲ್ಲರೂ ಮೇಜಿನ ಬಳಿ ಕುಳಿತೊಡನೆ ಶರಲೇಖ, ''ಕಂಗ್ರಾಜುಲೇಷನ್ಸ್ ಇನ್ಸ್ಪೆಕ್ಟರ್ ಶರಣ್ ಮತ್ತು ಪೋಲೀಸ್ ಆಫೀಸರ್ ಗಿರಿಜಮ್ಮ. ಒಳ್ಳೇ ಸ್ಟಿಂಗ್ ಆಪರೇಷನ್ ಮಾಡಿದಿರಿ'' ಎಂದದ್ದು ಕೇಳಿ ಒಂದು ಕ್ಷಣ ಶರಣ್ ತಬ್ಬಿಬ್ಬಾದ. ನಂತರ ಚೇತರಿಸಿಕೊಂಡು, ''ನಿಜಕ್ಕೂ ನೀವು ಒಳ್ಳೇ ಪತ್ತೇದಾರರೇ ಹೌದು. ಇಷ್ಟು ಬೇಗ ನಮ್ಮ ಮಾರು ವೇಷವನ್ನು ಹೇಗೆ ಕಂಡು ಹಿಡಿದಿರಿ?'' ಅಂತ ಕೇಳಿದ.

ಶರಲೇಖ, ''ದುರ್ಗದಿಂದ ಹೊರಡುವಾಗಲೇ ನಿಮ್ಮ ಕಾರಿನ ಆಂಧ್ರ ರಿಜಿಸ್ಟ್ರೇಷನ್ ಗಮನಿಸಿದೆ. ತಕ್ಷಣ ಒಂದು ಡಕಾಯಿತರ ಗುಂಪೊಂದು ಪೋಲೀಸ್ ವೇಷದಲ್ಲಿ ಬಂದು ಸಿರಾ ಬಳಿ ಆಂಧ್ರದಿಂದ ಬರುವ ಅಮಾಯಕ ಕಾರ್ ಯಾತ್ರಿಗಳನ್ನು, ಸುಲಿಗೆ ಮಾಡುತ್ತಿರುವ ಸುದ್ದಿ ಓದಿದ್ದು ನೆನಪಿಗೆ ಬಂತು. ನೀವು ಪೋಲೀಸಿನವರಿರಬಹುದೇ ಎಂಬ ಸಂದೇಹವೂ ಮೂಡಿತು. ಗಿರಿಜಮ್ಮನವರು ತಮ್ಮ ಬೆತ್ತದ ಬುಟ್ಟಿಯನ್ನು ತಂದಾಗ ಅದರ ಮುಚ್ಚಳದ ಚಿಲಕದಲ್ಲಿ ಪುಟ್ಟ ಲೆನ್ಸ್ ಒಂದು ಅಳವಡಿಸಿದ್ದು ಕಂಡಿತು. ಡಕಾಯಿತರನ್ನು ಹಿಡಿಯುವಾಗ

ಕೋರ್ಟಿನಲ್ಲಿ ನಿಲ್ಲುವಂತಹ ಸಾಕ್ಷ್ಯಗಳು ಬೇಕಾಗುತ್ತವೆ. ಅದನ್ನು ಸಂಗ್ರಹಿಸಲು ಗಿರಿಜಮ್ಮನವರ ಈ ವೇಷ ಎಂಬುದು ಖಾತ್ರಿಯಾಯಿತು. ಇದೊಂದು ಪೋಲೀಸ್ ಸ್ಟಿಂಗ್ ಆಪರೇಷನ್ ಆಗಿದ್ದರಿಂದ ಪರಿಸ್ಥಿತಿ ಪ್ರಕೋಪಕ್ಕೆ ಹೋದರೆ ಹತ್ತಿರದಲ್ಲೇ ನೆರವು ಸಿದ್ಧವಾಗಿರುವುದೂ ಖಂಡಿತವಾಗಿತ್ತು. ಅದಕ್ಕೆ ನಾನು ಎಲ್ಲವನ್ನು ಕುತೂಹಲದಿಂದ ಗಮನಿಸುತ್ತಿದ್ದೆ. ಈಗಾಗಲೇ ನಿಮ್ಮ ಗಿರಾಕಿಗಳು ಪೋಲೀಸ್ ಬಂಧನದಲ್ಲಿರುವುದು ಖಂಡಿತ ಅಲ್ಲವೇ ಆಫೀಸರ್ ಗಿರಿಜಮ್ಮ?'' ಎಂದು ಶರಲೇಖ ನಗುತ್ತಾ ಕೇಳಿದ.

ಗಿರಿಜಮ್ಮ, ಅವನೊಂದಿಗೆ ತಾವು ನಕ್ಕು ''ಇನ್ನು ಈ ಮಾರು ವೇಷದ ಅಗತ್ಯ ಇಲ್ಲ ಎಂದು ಕಾಣುತ್ತೆ'' ಎಂದು ಹೇಳಿ ವೇಷ ಬದಲಿಸಲು ರೆಸ್ಟ್ ರೂಮಿಗೆ ತೆರಳಿದರು. ಅವರು ಹಿಂದಕ್ಕೆ ಬಂದಾಗ, ಅವರ ಬಿಳಿಗೂದಲಿನ ಟೋಫನ್ ಮಾಯವಾಗಿತ್ತು. ಮಧ್ಯವಯಸ್ಸಿನ ಕಪ್ಪು ಕೂದಲಿನ ಪೋಲೀಸ್ ಇನ್ಸ್‌ಪೆಕ್ಟರ್ ಗಿರಿಜ ತಮ್ಮ ಯೂನಿಫಾರಮ್‌ನಲ್ಲಿ ನಿಂತಿದ್ದರು. ಅವರ ಬುಟ್ಟಿಯಲ್ಲಿ ಎಲ್ಲವನ್ನೂ ರೆಕಾರ್ಡ್ ಮಾಡುವ ಅತ್ಯಾಧುನಿಕ ವಿಡಿಯೋ ರೆಕಾರ್ಡರ್ ಬೆಚ್ಚಗೆ ಕೂತಿತ್ತು. ಹೋಟೆಲಿನಿಂದ ಹೊರಗೆ ಬರುವಷ್ಟರಲ್ಲಿ ಶರಣ್‌ನ ಆಫಿಶಿಯಲ್ ಜೀಪೊಂದು ಬಂದು ನಿಂತಿತ್ತು. ಶರಣ್ ಮತ್ತು ಗಿರಿಜ ಜೀಪನ್ನು ಹತ್ತಿದರು. ''ನಮ್ಮ ಪೋಲೀಸ್ ಡ್ರೈವರ್ ನಿಮ್ಮಿಬ್ಬರನ್ನೂ ಜೋಪಾನವಾಗಿ ಬೆಂಗಳೂರಿಗೆ ಬಿಡುತ್ತಾನೆ. ನೈಸ್ ಮೀಟಿಂಗ್ ಯು ಬೋಥ್'' ಎನ್ನುತ್ತಾ ನಮಗೆ ವಿದಾಯ ಹೇಳಿದ ಶರಣ್.


✵

---

## ಜೀಸಸ್ ಯಾರು

ತುಂಬಾ ವಯಸ್ಸಾದ ಮುದುಕಿಯೊಬ್ಬಳು ತನ್ನ ಬಂಗಲೆಯ ಪಕ್ಕದಲ್ಲೇ ನಡೆಯುತ್ತಿದ್ದ ಕಟ್ಟಡ ಕಾಮಗಾರಿಯ ಬಳಿ ಇರುವ ನೌಕರರು ಇರುತ್ತಿದ್ದ ರೀತಿ, ಆಡುತ್ತಿದ್ದ ಭಾಷೆ ಇವುಗಳನ್ನು ಕಂಡು ಅವರನ್ನು ಸ್ವಲ್ಪ ಸುಧಾರಣೆ ಮಾಡೋಣ ಅಂತ ಒಂದು ದಿನ ತನ್ನ ಮನೆಯಿಂದ ಊಟ ತೆಗೆದುಕೊಂಡು ಹೋಗಿ ನೌಕರರ ನಡುವೆ ಊಟ ಮಾಡುತ್ತಾ ಮಾತಾಡೋಣ ಅಂತ ಹೊರಟಳು. ಅಂದು ಅವಳು ಅವರೆಲ್ಲರಿಗೂ ಆಗಲಿ ಅಂತ ಸ್ವಲ್ಪ ಹೆಚ್ಚಿಗೇ ಊಟ ತೆಗೆದುಕೊಂಡು ಹೋದಳು. ದೊಡ್ಡ ಬ್ಯಾಗಿನೊಂದಿಗೆ ಕಾಮಗಾರಿ ನಡೆಯುತ್ತಿದ್ದ ಬಳಿ ಊಟದ ಸಮಯಕ್ಕೆ ಸರಿಯಾಗಿ ಹೋಗಿ ಅವರುಗಳ ನಡುವೆ ನಿಂತು ನಗು ಮುಖ ಮಾಡಿಕೊಂಡು "ನಿಮಗೆ ಜೀಸಸ್ ಕ್ರೈಸ್ಟ್ ಗೊತ್ತಾ'' ಅಂತ ಕೇಳಿದಳು. ನೌಕರರು ಕಕ್ಕಾಬಿಕ್ಕಿಯಾಗಿ ಅವಳನ್ನೇ ನೋಡುತ್ತಾ ಇದ್ದರು. ಅವರಲ್ಲೊಬ್ಬ ದೂರದಲ್ಲಿ ಕೆಲಸ ಮಾಡುತ್ತಿದ್ದ ಗುಂಪಿನತ್ತ ನೋಡಿ "ಓಯ್, ನಿಮಗ್ಯಾರಿಗಾದರೂ ಜೀಸಸ್ ಕ್ರೈಸ್ಟ್ ಗೊತ್ತಾ" ಅಂತ ಕೇಳಿದ. ಆ ಕಡೆಯಿಂದ ಯಾಕೆ ಅನ್ನೋ ಧ್ವನಿ ಬಂತು. ಮತ್ತೆ ಇವನು ಹೇಳಿದ. "ಯಾಕಂದ್ರೆ ಇಲ್ಲಿ ಅವನ ಹೆಂಡತಿ ಅವನಿಗಾಗಿ ಊಟ ತಂದಿದ್ದಾಳೆ" ಅಂದ.

# ಅಂತರಂಗದಲ್ಲಿ ಹಚ್ಚುವ ಸ್ಫೂರ್ತಿಯ ಹಣತೆ



**- ಅ.ರಾ. ಮಿತ್ರ**

**ದ**ಶಹರ ಎಂದರೆ 'ಹತ್ತು ದಿನ' (ಅಹರ್=ದಿನ) ಎಂದು ಅರ್ಥ. ಅದನ್ನೇ ದಸರಾ ಅಂತಲೂ ಎನ್ನುತ್ತೇವೆ. ಆಶ್ವಯುಜ ಶುಕ್ಲಪಕ್ಷದಲ್ಲಿ ಪಾಡ್ಯದಿಂದ ದಶಮಿಯವರೆಗೆ ಈ ಹಬ್ಬ ನಡೆಯುತ್ತದೆ.

ನಾವು ಹುಡುಗರಾಗಿದ್ದಾಗ ಶಾಲಾ ದಿನಗಳಲ್ಲಿ ಎರಡೇ ಪ್ರಮುಖ ಹಬ್ಬಗಳು ಒಂದು ಕ್ರಿಸ್‌ಮಸ್ ಇನ್ನೊಂದು ದಸರಾ. ಎರಡೂ ನಮಗೆ ದೀರ್ಘ ರಜೆಯ ಅವಧಿಗಳೇ ಆಗಿದ್ದುದರಿಂದ ನಾವೆಲ್ಲಾ ಕುಣಿದಾಡುತ್ತಿದ್ದೆವು. ದಸರಾದ ಅರ್ಥ ಹೇಳುತ್ತಾ ಹಂದಿನಕೆರೆ ರಾಮಾಶಾಸ್ತ್ರಿ ಎಂಬ ಬಂಧುಗಳು ಈ ದಸರಾ ಅವಧಿಯಲ್ಲಿ ಮೂರು ಬಗೆಯ ದೋಷಗಳಿಂದ ಮುಕ್ತಿ ಪಡೆಯಬೇಕು ಎನ್ನುತ್ತಿದ್ದರು. ಒಂದು ಕಾಯಕ (ದೇಹ) ದೋಷ! ನಮ್ಮದಲ್ಲದ ಹಣವನ್ನು ಲಪಟಾಯಿಸುವುದು ಮಹಾಪಾತಕ. ಪರರಿಗೆ ಹಿಂಸೆ ಕೊಡುವುದೂ ಈ ಪಾತಕಕ್ಕೆ ಸೇರುತ್ತದಂತೆ! ಇದಕ್ಕೆ ನಾವು ತುಂಬಾ ಹೆದರುತ್ತಿದ್ದೆವು. ಆದ್ದರಿಂದ ಅಪ್ಪನ ಜೇಬಿನಿಂದ ಅಥವಾ ಅಮ್ಮನ ಡಬ್ಬಿಯಿಂದ ದುಡ್ಡು ಕದಿಯುವಾಗ ತುಂಬಾ ಹೆದರಿಕೊಂಡೇ ಕದಿಯುತ್ತಿದ್ದೆವು. ಕೆಟ್ಟ ಮಾತಾಡುವುದು, ಸುಳ್ಳು ಹೇಳುವುದು ಇವು ವಾಚಾ ದೋಷಗಳಂತೆ. ಮೂರನೆಯದು ಮರೆತು ಹೋಗಿದೆ. ಕೆಟ್ಟ ಮಾತನಾಡದಿದ್ದರೆ ತಿಂದದ್ದು ಅರಗುತ್ತಿರಲಿಲ್ಲ. ಹುಡುಗರಿಗೆ ಸುಳ್ಳು ಹೇಳುವುದು, ಸಿಳ್ಳು ಹಾಕುವುದು, ತಮ್ಮನ್ನು ಹಿಡಿಯಲು ಬಂದವರಿಗೆ ಚಳ್ಳೆಹಣ್ಣು ತಿನ್ನಿಸುವುದು ಇವೆಲ್ಲಾ ಅಂಟಿಕೊಂಡ ಗುಣಗಳಾಗಿದ್ದರಿಂದ, ದೊಡ್ಡವರೂ ಆ ಕೆಲಸಗಳನ್ನು ಯಶಸ್ವಿಯಾಗಿ ಮಾಡುತ್ತಿದುದರಿಂದ ಫಲಾಫಲಗಳಿಗೆ ಹೆದರದೆ ಮುನ್ನುಗ್ಗುತ್ತಿದ್ದೆವು. ಸುಳ್ಳು ಹೇಳುವುದು ದೋಷ ಎಂದು ಹೇಳಿದರೆ ಏಕೆ ನಂಬಬೇಕೋ ಇಂದಿಗೂ ನನಗೆ ಅರ್ಥವಾಗಿಲ್ಲ.

> **ಬನ್ನಿ ಬನ್ನಿ ಎಂದು ಪ್ರೀತಿಯಿಂದ ಕರೆದು ಸಂತೋಷದ ಎಸಳುಗಳನ್ನು ಹಂಚುವುದು ಅಪರಂಜಿಯ ಆಸೆ**

ಸಪ್ತಮಿಯ ದಿನ ಸರಸ್ವತಿ ಪೂಜೆ ಸಂಭ್ರಮ. ಅಷ್ಟಮೀ ದಿನ ದುರ್ಗಾಪೂಜೆಯ ಸಡಗರ. ಮಹಾನವಮಿಯ ದಿನವಂತೂ ಆಯುಧ ಪೂಜೆ ಎಂಬ ಊರ ಹಬ್ಬ, ನವರಾತ್ರಿಯ ಒಂಬತ್ತು ದಿನಗಳಲ್ಲೂ ನಮಗೆ ಬಗೆಬಗೆಯ ತಿಂಡಿ. ಮಕ್ಕಳಿಗಾಗಿ ಅಮ್ಮಂದಿರು ಚಕ್ಕುಲಿ, ಕೋಡುಬಳೆ, ತಂಬಿಟ್ಟು, ಕಜ್ಜಾಯಗಳ ಬಾಗಿನ ಮಾಡುತ್ತಿದ್ದರು. ಇವು ಮಿನಿ ತಿಂಡಿಗಳು. ಪುಟಾಣಿ ಸೈಜಿನ ತಿಂಡಿಗಳು. ನಾವು ನೇರವಾಗಿಯೂ, ಕದ್ದೂ ತಿನ್ನುತ್ತಿದ್ದೆವು. ವಿಜಯದಶಮಿ

ದಿನ ನಮಗೆ ಸಮೃದ್ಧವಾಗಿ ಕಡಲೆಪುರಿ ಸಿಗುತ್ತಿತ್ತು. ಆಮೇಲೆ ಸೇಂದಿ ಲಾರಿಗಳಲ್ಲಿ ಅಥವಾ ಗೂಡ್ಸ್ ಲಾರಿಗಳಲ್ಲಿ, ಬಸ್ಸುಗಳಲ್ಲಿ ವಿಜೃಂಭಣೆಯ ಬಿಟ್ಟಿ ಪ್ರವಾಸ. ಹೋ ಎಂದು ಗಂಟಲು ಬಿರಿಯುವವರಿಗೆ ಕಿರುಚಿದರೆ ಡ್ರೈವರನಿಗೆ ಸಂತೋಷ. ಅವನೂ ನಮ್ಮನ್ನು ಕೂಗುವಂತೆ ಪ್ರಚೋದಿಸುತ್ತಿದ್ದ. ಅಲ್ಲದೆ ಬಸ್ ಲಾರಿಗಳ ಮಾಲೀಕರನ್ನು ಬಾಯಿಗೆ ಬಂದಂತೆ ಹೊಗಳಿ ಜೈಕಾರ ಹಾಕಿ ಅವನಿಗೆ 'ಮರಣಾನಂದ'ವಾಗುವಂತೆ ಮಾಡುತ್ತಿದ್ದೆವು.

ವಿಜಯದಶಮಿ ಎಂದು ಏಕೆ ಹೇಳುತ್ತಾರೆ ಎಂಬುದಕ್ಕೂ ನಮ್ಮ ಗುರುಗಳು ವಿವರಣೆ ಕೊಡುತ್ತಿದ್ದರು. ವಿಜಯನಗರದ ಹಂಪಿ ಸಾಮ್ರಾಜ್ಯದ ರಾಜರು ವಿಜಯದಶಮಿ ದಿನ ಶತ್ರುಗಳ ಮೇಲೆ ದಂಡೆತ್ತಿ ಹೋಗಲು ಶುಭ ದಿನವಂತೆ! ಹಂಪಿ ಹಾಳಾದ ಮೇಲೆ ಈ ಹಬ್ಬ ಮೈಸೂರು ಅರಸರ ಆಶ್ರಯದಲ್ಲಿ ನಡೆಯುತ್ತಿತ್ತು. ಅದೇ ಜೋರು, ಅದೇ ಸಂಭ್ರಮ, ಅದೇ ವೈಭವ.

ಆಗಿನ ದಿನಗಳಲ್ಲಿ ಇಷ್ಟೆಲ್ಲ ಸಂಭ್ರಮದ ನಡುವೆ ಮೈಸೂರು ನಗರದ ಪ್ರಜೆಗಳಿಗೆ ಕರಾಳ ದಿನಗಳೂ ಹೌದು. ಊರೂರುಗಳಿಂದ ಬರುವ ನೆಂಟರು ಅಲ್ಲಿ ಕೆಳಮಧ್ಯಮ ವರ್ಗದ ನೆಂಟರ ಮನೆಗಳಲ್ಲಿ ಬಿಡಾರ ಹೂಡುತ್ತಿದ್ದರು. ವಸತಿಯ ಹೋಟೆಲ್ಲುಗಳಿಲ್ಲದ ದಿನ ಅವು. ನೆಂಟರನ್ನು ನಿಭಾಯಿಸುವ ಬಲಿಷ್ಠ ತೊಡೆಗಳಿಲ್ಲದ ಸಾಮಾನ್ಯ ಆತಿಥೇಯರು ಜಂಗಾತ್ರಾಣ ಉಡುಗಿ; ದಸರಾ ಯಾಕಾದರೂ ಬರುತ್ತದೋ ಎಂದು ಹಿಡಿಶಾಪ ಅಥವಾ ಮೊರಶಾಪ ಹಾಕುತ್ತಿದ್ದ ದಿನಗಳವು. ಹಂಪಿಗೇನೋ ಬೇರೆ ಬೇರೆ ರಾಜ್ಯಗಳು ಶತ್ರುಗಳಂತೆ ನುಗ್ಗುತ್ತಿದ್ದುದರಿಂದ ಶತ್ರುಗಳನ್ನು ಬಗ್ಗು ಬಡಿಯುವ ಸಂಭ್ರಮವಿದ್ದರೆ ಬಡ ತಂದೆತಾಯಿಗಳು ನೆಂಟರ ಸ್ವರೂಪದ ಶತ್ರುಗಳ ಕಾಟವನ್ನು ಎದುರಿಸಲಾಗದೆ purse ಸ್ಥಿತಿ ಹಾಳಾಗಿ ಗಾಯಾಳುಗಳಾಗುತ್ತಿದ್ದರು.

ಮೈಸೂರು ಮಡಿಕೇರಿಗಳಲ್ಲಿ ನಾನು ಈ ದಸರಾ ಹಬ್ಬದ ಸಂಭ್ರಮಗಳನ್ನು ನೋಡಿದ್ದೇನೆ. ಅಲ್ಲಿಯ ಝುಗಝುಗಿಸುವ ಸಾಲುದೀಪಗಳ, ಕಟ್ಟಡ ದೀಪಗಳ, ಅರಮನೆಯ ದೀಪಗಳ ಪ್ರಖರ ಕಾಂತಿಗೆ ರೋಮಾಂಚನಗೊಳ್ಳುತ್ತಿದ್ದ ಜನರ ಕಣ್ಣಿನ ಕಾಂತಿಯನ್ನು ಕಂಡು ಹಿಗ್ಗಿದ್ದೇನೆ. ಮಕ್ಕಳ ಆನಂದವನ್ನು ತೂಗುವುದಕ್ಕೆ ಯಾವ ತಕ್ಕಡಿಯೂ ಇರಲಿಲ್ಲ. ಇಷ್ಟು ಕಾರ್ಪಣ್ಯಗಳ ನಡುವೆಯೂ ಅಲ್ಪ ಭೋಗಕ್ಕೆ ಮುಗಿ ಬೀಳುವ ಜನರ ಬದುಕು ನಮ್ಮ ಅಂತರಂಗದಲ್ಲಿ ಸ್ಫೂರ್ತಿಯ ಹಣತೆಯನ್ನು ಹಚ್ಚುತ್ತದಲ್ಲ! ಅದೇ ನಿಜವಾದ ಆನಂದ. ಬಡವರ ಆನಂದದ ಬಗ್ಗೆ "It is the only gleam in the otherwise gloomy worl" ಎಂದು ನೆಹರು ಹೇಳುತ್ತಿದ್ದರು.

ಸದಾ ಬದುಕಿನ ಭಾರಿ ನೊಗವನ್ನು ಹೊತ್ತು ತಿರುಗುವ ಬಡಜನ ಒಂದು ಕ್ಷಣ ನೊಗವನ್ನು ನೆಲಕ್ಕೆ ಒರಗಿಸಿ ಮಂದಹಾಸದ ಅಲೆಗಳಲ್ಲಿ ತೇಲುತ್ತಾರಲ್ಲ ಅದೇ ಬದುಕಿನ ಒಂದು ದೊಡ್ಡ ಪಾಠವಲ್ಲವೆ? ಈ ದಸರಾ ನನಗೆ ತನ್ನ ಬಹುಮುಖೀ ಜೀವನ ಸಂಸ್ಕೃತಿಯನ್ನು ಕರುಣಿಸಿದೆ. ನಮ್ಮ ತಾಪತ್ರಯಗಳೆಲ್ಲ ಹಾಗೆಯೇ ಇರಲಿ.

*ಅಳುತಳುತ ಬಂದೇವ*
*ನಗುನಗುತ ಸಾಗೋಣ*
*ಬಿಡ ನೂರು ವರುಷಾನ*
*ಹರುಷದಿ ಕಳೆಯೋಣ*

ಎಂದು ಬೇಂದ್ರೆಯವರು ಖುಷಿ ಪಟ್ಟರಲ್ಲ ಅದೇ ನಿಜವಾದ ಆನಂದ. ಹಬ್ಬವು ಈ ಆನಂದದ ಎಳ್ಳನ್ನು ಎಲ್ಲ ಮನೆಗೂ ಬೀರುತ್ತದೆ. ದಸರಾವಂತೂ


*ಕೆಸರು ಮರೆಸುವ ದಸರ*
*ಉಸಿರು ತಿಗುರುವ★ ದಸರ*
*ಹರಡಲಿ ಸಂಭ್ರಮದ ಪಸರ★★*
*ಈ ಮಾತಿಗಿಲ್ಲ ದುಸರಾ*

★ತಿಗುರು = ಸುಗಂಧ ಲೇಪ ಮಾಡು
★★ಪಸರ = ಅಂಗಡಿ ಸಾಲು

ಬನ್ನಿ ಮಂಟಪಕ್ಕೆ ಹೋಗುವುದು ಮೈಸೂರು ಅರಸರ ವಾಡಿಕೆ. ದಸರಾದಲ್ಲಿ ಪರಸ್ಪರ ಬನ್ನಿಯ ಎಸಳುಗಳನ್ನು ಕೊಟ್ಟು 'ಬಂಗಾರ ಪಡೆದು ಬಂಗಾರದಂತೆ ಇರೋಣ ಎನ್ನುವುದು ಕನ್ನಡ ನಾಡಿನ ಕೃಷಿಕರ ಒಂದು ಸೊಗಸಾದ ಗಾದೆ. ಬನ್ನಿ ಬನ್ನಿ ಎಂದು ಪ್ರೀತಿಯಿಂದ ಕರೆದು ಸಂತೋಷದ ಎಸಳುಗಳನ್ನು ಹಂಚುವುದು ಅಪರಂಜಿಯ ಆಸೆ.

---

## ಸಿಂಧು ಬಿಂದು



ಆದಿಶಕ್ತಿಯು ಅಮಿತ ಆಕಾರದಲ್ಲಿ ಇಡೀ ವಿಶ್ವ ಸಮಾವೇಶಗೊಳ್ಳಬಹುದೇ ವಿನಾ ವಿಶ್ವದ ಯಾವುದೇ ವಸ್ತುವಿನಲ್ಲಿ ಆದಿಶಕ್ತಿ ಸಮಾವೇಶಗೊಳ್ಳಲಾರಳು. ಸಿಂಧುವಿನಲ್ಲಿ ಬಿಂದು ಅಡಕವಾಗಬಹುದು. ಆದರೆ ಬಿಂದುವಿನಲ್ಲಿ ಸಿಂಧುವನ್ನು ಹಿಡಿದಿಡುವುದು ಅಸಾಧ್ಯ. ಒಂಭತ್ತು ಅಂಕೆ– ಪೂರ್ಣಾಂಕ. ಅದೊಂದು ಅದ್ವೈತದ ದ್ಯೋತಕ. ಜಗತ್ ಪ್ರಾರಂಭದಲ್ಲಿ 'ಏಕಬ್ರಹ್ಮ'ನಿಗೆ ಅನೇಕವಾಗುವ ಇಚ್ಛೆಯಾಗುತ್ತದೆ. ಅಲ್ಲಿಂದ ಪ್ರಾರಂಭವಾಯಿತು ಜಗತ್ತಿನ ಜೀವರಾಶಿ. ಈ ರೀತಿಯಾಗಿ ಅದ್ವೈತದ ಅಂಕೆ 9 ದ್ವೈತದಲ್ಲಿ ಕಾಲಿರಿಸಿತು. 9ರ ಅಂಕೆ ಗುಣಕವನ್ನು ಪಡೆಯತೊಡಗಿತು. 9ಕ್ಕೆ ಯಾವುದೇ ಅಂಕೆಯಿಂದ ಗುಣಿಸಿದರೂ ಬರುವ ಅಂಕೆಗಳ ಮೊತ್ತ ಪುನಃ ಒಂಭತ್ತೇ ಆಗುತ್ತದೆ. ಉದಾಹರಣೆಗೆ : 9 x 2 = 18 (1 + 8 = 9) 9 x 3 = 27 (7 + 2 = 9) 9 x 4 = 36 (3 + 6 = 9) 9 x 5 = 45 (4 + 5 = 9) 9 x 6 = 54 (5 + 4 = 9) 9 x 7 = 63 (6 + 3 = 9) 9 x 8 = 72 (7 + 2 = 9) 9 x 9 = 81 (1 + 8 = 9) 9 x 10 = 90 (9 + 0 = 9) ಈ ರೀತಿಯಾಗಿ 9 ತನ್ನ ಅಸ್ತಿತ್ವವನ್ನು ಅಬಾಧಿತವಾಗಿರಿಸಿಕೊಂಡು ಪೂರ್ಣತ್ವವನ್ನು ಪಡೆಯಿತು.

# ಈ ಸಂಭಾಷಣೆ

**- ಬೇಲೂರು ರಾಮಮೂರ್ತಿ**

ಗಿರಾಕಿ – ನಮಸ್ಕಾರ, ನನ್ನ ಆರ್ಡರ್ ತಗೋತೀರಾ?

ಆಪರೇಟರ್ – ದಯವಿಟ್ಟು ನಿಮ್ಮ ವಿವಿದೋದ್ದೇಶ ಆಧಾರ್ ಕಾರ್ಡ್ ಸಂಖ್ಯೆ ತಿಳಿಸಿ ಸರ್.

ಗಿರಾಕಿ – ಇದೋ ತಗೊಳ್ಳಿ ನನ್ನ ಆಧಾರ್ ನಂಬರು 000111222333456789.

ಆಪರೇಟರ್ – ಸರಿ, ನಿಮ್ಮ ಹೆಸರು ಪ್ರದೀಪ್ ಶಂಕರಪ್ಪ – ಪ್ರಮೋದ್ ಅಪಾರ್ಟ್‌ಮೆಂಟ್‌ನಿಂದ ಮಾತಾಡ್ತಿದೀರ ನಿಮ್ಮ ಮೊಬೈಲ್ ಸಂಖ್ಯೆ, 6665545478 ನಿಮ್ಮ ಸ್ಥಿರ ದೂರವಾಣಿ ಸಂಖ್ಯೆ 102030405. ನೀವೀಗ ನಿಮ್ಮ ಮನೆಯ ಸ್ಥಿರ ದೂರವಾಣಿ ಸಂಖ್ಯೆಯಿಂದ ಮಾತಾಡ್ತಿದೀರ

ಗಿರಾಕಿ – ಅರೇ, ನನ್ನ ಫೋನ್ ನಂಬರುಗಳೆಲ್ಲ ನಿಮಗೆ ಹೇಗೆ ಗೊತ್ತು?

ಆಪರೇಟರ್ – ನಿಮ್ಮ ಆಧಾರ್ ಕಾರ್ಡಿನ ಸಂಖ್ಯೆಯನ್ನು ನಮ್ಮ ಕಂಪ್ಯೂಟರಿಗೆ ಫೀಡ್ ಮಾಡಿದಾಗ ಅದು ನಿಮ್ಮ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನೂ ತಿಳಿಸಿದೆ.

ಗಿರಾಕಿ – ಸಂತೋಷ, ನಾನು ಈಗ ಒಂದು ಮೀನಿನ ಪಿಜ್ಜಾ ಆರ್ಡರ್ ಮಾಡಬೇಕು.

ಆಪರೇಟರ್ – ಮೀನಿನ ಪಿಜ್ಜಾ ನಿಮ್ಮ ಆರೋಗ್ಯಕ್ಕೆ ಒಳ್ಳೇದಲ್ಲ ಸರ್. ನಿಮ್ಮ ಆರೋಗ್ಯ ಮಾಹಿತಿ ಪ್ರಕಾರ ನಿಮಗೆ ಹೆಚ್ಚಿನ ಬಿ.ಪಿ. ಇದೆ ಮತ್ತು ನಿಮ್ಮ ದೇಹದ ಕೊಬ್ಬಿನ ಪ್ರಮಾಣ ಕೂಡಾ ಹೆಚ್ಚಾಗಿದೆ.

ಗಿರಾಕಿ – (ಅಚ್ಚರಿಯಿಂದ) ಏನಂದ್ರೀ, ನನಗೆ ಬಿ.ಪಿ. ಮತ್ತು ಕೊಬ್ಬು ಇದೆಯಾ ಹಾಗಾದರೆ ನಾನು ಏನು ಆಹಾರ ಆರ್ಡರ್ ಮಾಡಬೇಕು ಅಂತ ನಿಮ್ಮ ಶಿಫಾರಸ್ಸು.

ಆಪರೇಟರ್ – ಕೊಬ್ಬೇ ಇಲ್ಲದ ನಮ್ಮ ವಿಶೇಷ ಪಿಜ್ಜಾ ತಗೋಳಿ ನಿಮಗೆ ಅದು ಇಷ್ಟವಾಗುತ್ತೆ.

ಗಿರಾಕಿ – ಅದು ನನಗೆ ಇಷ್ಟ ಆಗುತ್ತೆ ಅಂತ ನಿಮಗೆ ಹೇಗೆ ಗೊತ್ತು?

ಆಪರೇಟರ್ – ನೀವು ಹೋದ ವಾರ ತಾನೇ ಹೆಚ್ಚಿನ ಕೊಬ್ಬಿನಂಶ ಇರುವ ಆಹಾರಗಳು ಮತ್ತು ಅವುಗಳಿಂದ ನಮ್ಮ ದೇಹಕ್ಕೆ ಆಗೋ ಉಪಯೋಗ ಎನ್ನುವ

ಪುಸ್ತಕವನ್ನು ನ್ಯಾಷನಲ್ ಲೈಬ್ರರಿಯಿಂದ ತಗೊಂಡಿದೀರ. ಅಂದ್ರೆ ನಿಮಗೆ ಬಿ.ಪಿ. ಮತ್ತು ಕೊಬ್ಬು ಇವೆರಡನ್ನೂ ಕಡಿಮೆ ಮಾಡುವುದರಲ್ಲಿ ಆಸಕ್ತಿ ಇದೆ.

ಗಿರಾಕಿ – ಸರಿ, ನೀವು ಹೇಳಿದ ಕೊಬ್ಬೇ ಇಲ್ಲದ ವಿಶೇಷ ಪಿಜ್ಜಾನೇ ಕೊಡಿ. ಆದರೆ ಫ್ಯಾಮಿಲಿ ಸೈಜಿನದು ಮೂರು ಕೊಡಿ.

ಆಪರೇಟರ್ – ಒಳ್ಳೇದು ಸರ್. ಅಷ್ಟು ಪಿಜ್ಜಾ ನಿಮ್ಮ ಹತ್ತು ಜನರ ಕುಟುಂಬಕ್ಕೆ ಸಾಕು.

ಗಿರಾಕಿ – ನಮ್ಮ ಮನೆಯಲ್ಲಿ ಹತ್ತು ಜನ ಇದಾರೆ ಅಂತ ನೀವು ಹೇಗೆ ಹೇಳ್ತೀರ?

ಆಪರೇಟರ್ – ಅದಕ್ಕೆ ನಿಮ್ಮ ಆಧಾರ್ ಕಾರ್ಡೇ ಆಧಾರ. ಸರಿ ಈಗ ನಾನು ಬಿಲ್ ಮಾಡ್ತೀನಿ ನೀವು ಒಟ್ಟು 2,450/- ರೂಪಾಯಿ ಕೊಡಿ.

ಗಿರಾಕಿ – ನನ್ನ ಕ್ರೆಡಿಟ್ ಕಾರ್ಡಿಂದ ಹಣ ತಗೊಳ್ಳಿ.

ಆಪರೇಟರ್ – ಇಲ್ಲ ಸರ್. ನಿಮ್ಮ ಬಳಿ ಮೂರು ಕ್ರೆಡಿಟ್ ಕಾರ್ಡ್‌ಗಳಿವೆ. ಆದರೆ ನೀವು ನಿಮ್ಮ ಎಲ್ಲಾ ಕ್ರೆಡಿಟ್ ಕಾರ್ಡಿಂದ ಈಗಾಗಲೇ ಹೆಚ್ಚಿನ ಖರ್ಚು ಮಾಡಿದೀರಿ. ಅದರ ಬಾಬ್ತೇ ನೀವು ಸುಮಾರು ಒಂದೂ ವರೆ ಲಕ್ಷ ರೂಪಾಯಿಗಳನ್ನು ಕಳೆದ ಅಕ್ಟೋಬರ್ ತಿಂಗಳಿನಿಂದಲೇ ಬ್ಯಾಂಕಿಗೆ ಕಟ್ಟದೇ ಉಳಿಸಿಕೊಂಡು ಬಂದಿದ್ದೀರಿ. ಇನ್ನು ನೀವು ನಿಮ್ಮ ಗೃಹ ಸಾಲವನ್ನು ತಡವಾಗಿ ಕಟ್ಟಿದ ಬಡ್ಡಿಯ ಬಾಬ್ತು ಅದರಲ್ಲಿ ಸೇರಿಲ್ಲ ಸರ್.

ಗಿರಾಕಿ – ಏನ್ರೀ ನನ್ನ ಜಾತಕವನ್ನೇ ತೆಗೆದು ಇಡ್ತಾ ಇದೀರಿ. ಸರಿ ಹಾಗಿದ್ರೆ, ನಿಮ್ಮವರು ಪಿಜ್ಜಾ ಡಿಲೆವರಿ ಮಾಡೋಕೆ ಮೊದಲು ನಾನು ಹತ್ತಿರದ ಎ.ಟಿ.ಎಂ.ಗೆ ಹೋಗಿ ಹಣ ಡ್ರಾ ಮಾಡಿ ತಂದಿಟ್ಟಿರ್ತೀನಿ. ಪಿಜ್ಜಾ ಕಳಿಸಿ.

ಆಪರೇಟರ್ – ಅದೂ ಕೂಡಾ ಸಾಧ್ಯವಿಲ್ಲ ಅಂತ ಕಾಣುತ್ತೆ ಸರ್. ಏಕೆಂದರೆ ನಿಮ್ಮ ಕ್ರೆಡಿಟ್ ಕಾರ್ಡಿಂದ ನೀವು ಪಡೆಯಬಹುದಾದ ಹಣದ ಮೊತ್ತದ ಮಿತಿಯನ್ನು ನೀವು ಈಗಾಗಲೇ ದಾಟಿದ್ದೀರಿ.

ಗಿರಾಕಿ – ಹೋಗಲಿ ಬಿಡಿ, ನನ್ನ ಬಳಿ ಸಾಕಷ್ಟು ಹಣ ಇದೆ. ನಿಮ್ಮವರು ಪಿಜ್ಜಾ ತಂದ ತಕ್ಷಣ ನಾನು ಹಣ ಕೊಟ್ಟು ಕಳಿಸ್ತೀನಿ. ಎಷ್ಟು ಹೊತ್ತಾಗುತ್ತೆ ನಿಮ್ಮ ಹುಡುಗರು ಬರೋದು.

ಆಪರೇಟರ್ – ಸುಮಾರು ಒಂದು ಗಂಟೆಯಾಗಬಹುದು. ಅಲ್ಲೀವರೆಗೂ ಕಾಯೋಕೆ ಆಗಲ್ಲ ಅಂದ್ರೆ ನೀವೇ ನಿಮ್ಮ ಮೋಟರ್ ಸೈಕಲಲ್ಲಿ ಬಂದು ತಗೊಂಡು ಹೋಗಬಹುದು.

ಗಿರಾಕಿ – ಏನು, ಏನಂದ್ರೀ. ನನ್ನತ್ರ ಮೋಟರ್ ಸೈಕಲ್ ಇದೆ ಅಂತ ನಿಮಗೆ ಯಾರು ಹೇಳಿದ್ದು?

ಆಪರೇಟರ್ – ನಮ್ಮ ಹತ್ತಿರ ಇರೋ ಮಾಹಿತಿಯ ಪ್ರಕಾರ ನಿಮ್ಮ ಮೋಟರ್ ಸೈಕಲ್ ರಿಜಿಸ್ಟ್ರೇಷನ್ ಸಂಖ್ಯೆ ಎಎಎ 1112 ಮುಂದಿನ ತಿಂಗಳು ಅದರ ವಿಮೆ ಕಟ್ಟಬೇಕು.

ಗಿರಾಕಿ – ಇದೇನಪ್ಪಾ ಇವರಿಗೆ ನನ್ನ ಬಳಿ ಮೋಟರ್ ಸೈಕಲ್ ಇರೋದು ಮತ್ತು ಅದರ ನಂಬರ್ ಕೂಡಾ ಗೊತ್ತಿದೆಯಲ್ಲ.

ಆಪರೇಟರ್ – ಇನ್ನೇನಾದರೂ ಬೇಕಾ ಸರ್.

ಗಿರಾಕಿ – ಇನ್ನೇನೂ ಇಲ್ಲ. ಆದರೆ ನಿಮ್ಮ ಜಾಹೀರಾತಿನ ಪ್ರಕಾರ ಮೂರು ಪಿಜ್ಜಾಗೆ ಮೂರು ತಂಪಾದ ಪಾನೀಯಗಳ ಬಾಟಲನ್ನೂ ಉಚಿತವಾಗಿ ಕೊಡ್ತೀರ ತಾನೇ.

ಆಪರೇಟರ್ – ಸಾಮಾನ್ಯವಾಗಿ ನಾವು ಕೊಡ್ತೀವಿ ಸರ್. ಆದರೆ ನಿಮ್ಮ ಆರೋಗ್ಯದ ಹಿತದೃಷ್ಟಿಯಿಂದ ಮತ್ತು ನೀವು ಈಗಾಗಲೇ ಸಕ್ಕರೆ ಕಾಯಿಲೆಯವರಾದ್ದರಿಂದ ತಂಪಾದ ಪಾನೀಯದ ಬಾಟಲುಗಳನ್ನು ನಿಮಗೆ ಕಳಿಸುತ್ತಿಲ್ಲ.

ಗಿರಾಕಿ – ನಾನು ಕುಡಿದೆ ಇದ್ರೇನು, ನಮ್ಮ ಮನೆಯಲ್ಲಿ ಬೇರೆಯವರು ಕುಡೀತಾರೆ.

ಆಪರೇಟರ್ – ಆದರೆ ಬಿಲ್ಲು ನಿಮ್ಮ ಹೆಸರಿನಲ್ಲಿದೆ. ಯಾರ ಹೆಸರಿನಲ್ಲಿ ಬಿಲ್ ಮಾಡುತ್ತೇವೋ, ಅವರಿಗೆ ಸಕ್ಕರೆ ಕಾಯಿಲೆ ಇದ್ದರೆ ನಾವು ತಂಪಾದ ಪಾನೀಯ ಸರಬರಾಜು ಮಾಡುವಂತಿಲ್ಲ.

ಗಿರಾಕಿ – ಏಯ್ ಬೇಕೂಫ, ತಲೆ ಹರಟೆ ಮಾಡಿದರೆ ಅಲ್ಲಿಗೇ ಬಂದು ನಿನ್ನ ಹಲ್ಲು ಉದುರಿಸಿಬಿಡ್ತೀನಿ.

ಆಪರೇಟರ್ – ನಿಮ್ಮ ನಾಲಿಗೆಯ ಮೇಲೆ ಹಿಡಿತವಿರಲಿ ಸರ್. ನೀವು ತಾರೀಖು 28.5.2012 ರಂದು ಒಬ್ಬ ಪೋಲೀಸಿನವರ ಮೇಲೆ ಅವಾಚ್ಯ ಶಬ್ದಗಳ ಬಳಕೆ ಮಾಡಿದ್ದೀರಿ ಅಂತ ನಿಮಗೆ ಎರಡು ತಿಂಗಳು ಜೈಲು ವಾಸ ಮತ್ತು 5,000 ಸಾವಿರ ರೂಪಾಯಿಗಳ ಜುಲ್ಮಾನೆ ವಿಧಿಸಿದ್ದರು. ನೀವು ಜುಲ್ಮಾನೆಯನ್ನೂ ಕೊಟ್ಟು ಜೈಲಿನಲ್ಲೂ ಎರಡು ತಿಂಗಳು ಇದ್ದು ಬಂದಿದ್ದೀರಿ. ಮತ್ತೆ ಅಲ್ಲಿಗೆ ಹೋಗೋ ಆಸೆ ಇದೆಯೇನು?

ಗಿರಾಕಿ – (ಫೋನ್ ಹಿಡಿದಿದ್ದಂತೆಯೇ ತಲೆ ತಿರುಗಿ ಬಿದ್ದ)

*(ಆಧಾರ – ಅಂತರ್ಜಾಲ)*

✵

# ವಸ್ತ್ರಸಂಹಿತೆಯ ಅಸ್ತ್ರ

**- ಕೃಷ್ಣ ಸುಬ್ಬರಾವ್**

**ಕಾ**ಯಿದೆ ಕಾನೂನುಗಳು ಜನರ ನಡವಳಿಕೆಯ ಮೇಲೆ ನಿರ್ಧಾರವಾಗುತ್ತದೆ ಎಂಬುದು ನಮಗೆ ಇತ್ತೀಚೆಗೆ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಿದೆ. ದೆಹಲಿಯಲ್ಲಿ ತರುಣಿಯೊಬ್ಬಳ ಮೇಲೆ ನಡೆದ ಅತ್ಯಾಚಾರ ಕಾಂಡ ಎಲ್ಲರನ್ನು ಬೆಚ್ಚಿಬೀಳಿಸಿದೆ. ಆರೋಪಿಗಳಿಗೆ ಗಲ್ಲು ಶಿಕ್ಷೆ ಕೊಟ್ಟಿರುವುದು ಒಂದು ಕಡೆ ಸಮಾಧಾನಕರವಾದ ಸಂಗತಿಯಾಗಿದ್ದರೂ, ಘಟನೆಯನ್ನು ಬೇರೆ ಬೇರೆ ದೃಷ್ಟಿಕೋನದಿಂದಲೂ ನೋಡಲಾಗುತ್ತಿದೆ. ಸರಿ ರಾತ್ರಿಯಲ್ಲಿ ಹೆಣ್ಣು ಮಕ್ಕಳು (ತಮ್ಮ ಪ್ರಿಯಕರ ಅಥವಾ ಗಂಡನ ಜೊತೆಯಿದ್ದರೂ) ಓಡಾಡುವುದು, ಹಾಗೆ ತಮಗಿಷ್ಟವಾದ ಉಡುಪುಗಳನ್ನು ಧರಿಸಿ ಓಡಾಡುವುದು ಅಪಾಯಕಾರಿಯೆಂದು ಜನರು ತಿಳಿಯುತ್ತಿದ್ದಾರೆ. ಹೀಗಾಗಿ 'ವಸ್ತ್ರ ಸಂಹಿತೆ'' ಇಂದಿನ ಎಲ್ಲರ ಬಾಯಲ್ಲೂ ಹರಿದಾಡುವ ವಿಷಯವಾಗಿದೆ. ವರನಟ ರಾಜ್‌ಕುಮಾರ್ ಅಭಿನಯದ 'ಮಣ್ಣಿನಮಗ' ಚಿತ್ರದಲ್ಲಿ ಮಿನುಗುತಾರೆ ಕಲ್ಪನಾ ಹಾಡಿದ (ಚಿತ್ರದಲ್ಲಿ) ''ಇದೇನು ಸಭ್ಯತೆ ಇದೇನು ಸಂಸ್ಕೃತಿ...'' ಬಹುಶಃ ಇನ್ನುಮುಂದೆ ರಾಜ್ಯ ಸರ್ಕಾರದ ಕಚೇರಿಗಳಲ್ಲಿ ಸ್ವಾಗತ ಗೀತೆಯಾಗಲಿದೆ. ರಾಜ್ಯ ಸರ್ಕಾರವೂ ಈಗಾಗಲೇ ವಸ್ತ್ರಸಂಹಿತೆ ಜಾರಿಗೆ ತಂದಿದೆ. ಸಭ್ಯ ಉಡುಪಿನ ಪಟ್ಟಿಯನ್ನು ಸಿದ್ಧಪಡಿಸಿದೆ. ಟೀ ಶರ್ಟ್, ಜೀನ್ಸ್ ಪ್ಯಾಂಟ್ ಮಹಿಳೆಯರಿಗೆ ಸ್ಕರ್ಟ್, ಲಂಗ, ಜೀನ್ಸ್ ಟಾಪ್ಸ್‌ಗಳನ್ನು ನಿಷೇಧಿಸಲಾಗಿದೆ.

**ಜೇಬಿಲ್ಲದ ಅಂಗಿಗಳನ್ನು ಹಾಕಿಕೊಂಡು ಸರ್ಕಾರಿ ಕಚೇರಿಗೆ ಬಂದರೆ ಮಾಮೂಲನ್ನು ಎಲ್ಲಿ ಇಟ್ಟುಕೊಳ್ಳುವುದು?**

'ವಸ್ತ್ರ ಸಂಹಿತೆ' ಜಾರಿತರಲು ಸರ್ಕಾರ ಯಾವ ಯಾವ ಕಷ್ಟಗಳನ್ನು ಎದುರಿಸಬೇಕಾಯಿತು. ಸಭೆಯಲ್ಲಿ ಏನೇನೋ ವಿಚಾರಗಳು ಚರ್ಚೆಗೆ ಬಂದವು. ಹಾಗೂ ನೌಕರರ ಸಂಘಗಳ ಪ್ರತಿಭಟನೆ, ಪ್ರತಿಕ್ರಿಯೆಗಳು ಎಲ್ಲವನ್ನು ನನ್ನ ಗೆಳೆಯ ರಾಮಣ್ಣ ಗುಟ್ಟಿನಲ್ಲಿ ನನ್ನ ಕಿವಿಯಲ್ಲಿ ನಿನ್ನೆ ತಾನೇ ಒದರಿದ. ನಾನೂ ನಿಮಗೂ ಹೇಳುತ್ತಿದ್ದೇನೆ. ಯಾರ ಮುಂದೆಯೂ ಬಾಯಿ ಬಿಡೊಲ್ಲ ಎಂದು ಅವನಿಗೆ ಹೇಳಿದ್ದೇನೆ. ಹಾಗೆ ನಡೆದುಕೊಂಡು ಇದ್ದೇನೆ ಕೂಡ. ಲಿಖಿತ ರೂಪದಲ್ಲಿ ತಾನೇ ನಿಮಗೆ ನಾನು ತಿಳಿಸುತ್ತಿರುವುದು.

'ವಸ್ತ್ರಸಂಹಿತೆ' ಜಾರಿ ತರಲು ಇಂದಿನ ಮುಖ್ಯ ಮಂತ್ರಿಗೆ ಸುಲಭವಾಗಿದ್ದು ಅವರ ಸರಳ ಉಡುಪು. ಮೊನ್ನೆ ಚೀನಾಗೆ ಭೇಟಿ ಕೊಟ್ಟಾಗ ಸೂಟು ಬೂಟು ಅವರಿಗೆ ಮುಜುಗರ ತಂದಿತೆಂದು ಹೇಳಿದ್ದಾರೆ. ಸಿಬ್ಬಂದಿಯವರು ಉಡುಪು ಧರಿಸುವುದರಲ್ಲಿ ತಾವೂ ಕಮ್‌ಫರ್ಟಬಲ್ ಆಗಿರಬೇಕು ಹಾಗೂ ಬೇರೆ ಸಹದ್ಯೋಗಿಗಳು ಸಂಭಾವಿತರಂತೆ ನಡೆದುಕೊಳ್ಳುವಂತಿರಬೇಕು ಎಂಬ ಸಂದೇಹ ರವಾನೆಯಾಗಿದೆ. ಹೆಣ್ಣುಮಕ್ಕಳ ಸಂರಕ್ಷಣೆಯ

ಜವಾಬ್ದಾರಿ ಹೊತ್ತ ಸರ್ಕಾರ ಈ ಹೊಸ ಯೋಜನೆ(ವಸ್ತ್ರಸಂಹಿತೆ)ಯ ನೆಪದಲ್ಲಿ ಸರ್ಕಾರದ ಸ್ವಚ್ಛ ಆಡಳಿತ ನಡೆಸುವ ಹುನ್ನಾರವೂ ನಡೆದಿದೆಯಂತೆ. ಯೋಜನೆಯ ಜಾರಿಯ ಎರಡನೇ ಹಂತದಲ್ಲಿ ಕೆಲವು ಬದಲಾವಣೆಗಳನ್ನು ಕಾಣಬಹುದಂತೆ.

ಸರ್ಕಾರದ ನೌಕರರು (ಪುರುಷರು) ಇನ್ನುಮುಂದೆ ಜೇಬಿಲ್ಲದ ಅಂಗಿಗಳನ್ನು ಧರಿಸಿದರೆ ಭ್ರಷ್ಟಾಚಾರ ತಡೆಗಟ್ಟಬಹುದೆಂದು ಚಿಂತಿಸಲಾಗಿದೆಯಂತೆ. ಹಾಗೆ ಜೇಬಿಲ್ಲದ ಪ್ಯಾಂಟು ಅಥವಾ ಮುಖ್ಯಮಂತ್ರಿಗಳ ರೀತಿ ಪಂಚೆ ಉಟ್ಟರೆ ಲಂಚ ತೆಗೆದುಕೊಂಡು ಹಣವನ್ನು ಇಟ್ಟುಕೊಳ್ಳಲು ಜಾಗವಿಲ್ಲದೆ ಅನಿವಾರ್ಯವಾಗಿ ಲಂಚವನ್ನು ಪಡೆಯುವುದನ್ನು ನಿಲ್ಲಿಸಿಬಿಡುವ ಸಾಧ್ಯತೆಗಳಿರುತ್ತದೆಯಂತೆ. ಹಾಗೆ ತಲೆಯ ಮೇಲೆ ಟೋಪಿಯಾಗಲಿ, ಹ್ಯಾಟಾಗಲಿ, ರುಮಾಲ್ ಆಗಲಿ ಧರಿಸದೆ ಇದ್ದರೆ 'ಗಿಂಬಳ'ವನ್ನು ಗುಪ್ತವಾಗಿಟ್ಟುಕೊಳ್ಳಲು ಸಾಧ್ಯವಾಗದೆ ಪ್ರಾಮಾಣಿಕ ಅಧಿಕಾರಿಗಳಾಗಿ ಮೆರೆಯಬಹುದು. ಹಾಗೆ ಶೂಸು, ಕಾಲುಚೀಲವನ್ನು ನಿಷೇಧಿಸಬೇಕು. ಅಲ್ಲೂ ಹಣ ಬಚ್ಚಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಸರ್ಕಾರಿ ನೌಕರರು ಆಫೀಸಿಗೆ ಬಂದು ತಮ್ಮ ಸ್ಥಾನದಲ್ಲಿ ತಮ್ಮ ಕೋಟನ್ನು ತಗುಲಿಹಾಕಿ 'ಮಾಯಾ' ವಾಗುವ ಪದ್ಧತಿಯನ್ನು ತಪ್ಪಿಸಲು ಕೋಟನ್ನು ಬ್ಯಾನ್ ಮಾಡಬೇಕು. ಅದೂ ಅಲ್ಲದೆ ಅಗಾಧವಾಗಿ ಬೆಳೆಯುತ್ತಿರುವ ಭ್ರಷ್ಟಾಚಾರಕ್ಕೆ ಸರ್ಕಾರಿ ನೌಕರನ ಕೋಟಿನ ಹೊರ ಹಾಗು ಒಳ ಜೇಬುಗಳೇ ಕಾರಣವೆಂದು ಇತ್ತೀಚಿನ ಸಮೀಕ್ಷೆಯೊಂದು ದೃಢಪಡಿಸಿದೆ.

ಸುತ್ತೋಲೆಯಲ್ಲಿ ಅನೇಕ ವಿಷಯಗಳು ಬಿದ್ದಿರುವುದರಿಂದ ಅದರ ಎರಡನೆ ಭಾಗ ಒಂದೆರಡು ದಿನಗಳಲ್ಲಿ ಹೊರಬೀಳಲಿದೆ. 'ವಸ್ತ್ರ ಸಂಹಿತೆ' ಕೇವಲ ಆಫೀಸಿನೊಳಗೆ ಹಾಗೂ ಆಫೀಸಿನ ವೇಳೆಗೆ ಮಾತ್ರ ಸೀಮಿತವಾಗದೆ ನೌಕರರು ಮನೆಯಿಂದ ಹೊರಟು ಅವರ ಮನೆ ತಲುಪುವವರೆಗೂ ಅನ್ವಯವಾಗುತ್ತದೆಯಂತೆ. ಕಚೇರಿ ಹೊರಗೆ ಸಿಬ್ಬಂದಿಯವರು ಯಾವ ನಿಯಂತ್ರಣಕ್ಕೆ ಸಿಕ್ಕುತ್ತಾರೆ ಎಂಬ ಪ್ರಶ್ನೆ ಉದ್ಭವವಾಗಬಹುದು. ವಿಧಾನ ಸೌಧಕ್ಕೆ ಬರುವ ಬಸ್ಸಿನ ಕಂಡಕ್ಟರ್ 'ವಸ್ತ್ರ ಸಂಹಿತೆ' ಉಲ್ಲಂಘನೆ ಮಾಡಿದವರಿಗೆ ಬಸ್‌ನಲ್ಲಿ ಹತ್ತಿಸುವುದಿಲ್ಲ. ಖಾಸಗಿ ವಾಹನಗಳಲ್ಲಿ ಬಂದು ಹೋಗುವವರ ಬಗ್ಗೆ ನಿಯಂತ್ರಣ ಸ್ವಲ್ಪ ಕಷ್ಟವಾಗಬಹುದು. ಆಫೀಸಿಗೆ ಬಂದು ಸಮವಸ್ತ್ರ ಧರಿಸುವ ನಾಲ್ಕನೆಯ ದರ್ಜೆ ನೌಕರರ ಹಾಗೆ ಎಲ್ಲರೂ ತಮಗಿಷ್ಟವಾದ ಉಡುಪನ್ನು ಧರಿಸಿ ಆಫೀಸಿನಲ್ಲಿ ಬದಲಾಯಿಸಲು ಹೊರಟರೆ ತುಂಬಾ ಸಮಯ ಅವರು ಸೀಟಿಗೆ ಬರುವುದೇ ಇಲ್ಲ ಎಂಬ ಭಯವೇ ಆಡಳಿತ ವರ್ಗಕ್ಕೆ ಜಾಸ್ತಿ ಆದ್ದರಿಂದ ಈ ತಿದ್ದುಪಡಿ.

ಆಫೀಸಿಗೆ ಹೋಗುವ ಸಿಬ್ಬಂದಿಯ ವಸ್ತ್ರ 'ಸಭ್ಯ'ವಾಗಿದೆ ಎಂದು ಬಾಗಿಲಲ್ಲೇ ತಂತ್ರಜ್ಞಾನದ ಯಂತ್ರವೇ ನಿರ್ಧರಿಸುತ್ತದೆ. ಸರ್ಕಾರದ ಸುತ್ತೋಲೆಗೆ ಅನುಗುಣವಾಗಿ ವಸ್ತ್ರ ಇಲ್ಲದಿದ್ದರೆ ಸಿಬ್ಬಂದಿ ಒತ್ತುವ ಐಡೆಂಟಿಟಿ ಕಾರ್ಡ್‌ಗೆ 'ಎಂಟ್ರಿ' ಹಲ್ಲು ಪಕ್ಕಕ್ಕೆ ಸರಿಯದೆ ಅಡ್ಡವಡ್ಡುತ್ತದೆ. ಪಂಚೆಯುಟ್ಟವರು ಸಭ್ಯ ಉಡುಪು ಧರಿಸಿದ್ದರೂ ಆ ಅಡ್ಡಹಲ್ಲಿಗೆ ಸಿಕ್ಕಿ ಹಾಕಿಕೊಂಡರೆ ಪ್ರಯಾಸವಾಗುತ್ತದೆ. ಅವರ ಬಗ್ಗೆ ಯೋಚನೆ ಮಾಡಲಾಗುತ್ತಿದೆಯಂತೆ.

ಪಂಚೆ 'ಸಭ್ಯ' ಉಡುಪಾದರೂ ಕಚ್ಚೆಪಂಚೆ ಬಗ್ಗೆ ಹೆಚ್ಚಿನ ಒಲವಿಲ್ಲವಂತೆ. ಕಾರಣ, ಕಚ್ಚೆ ಭದ್ರವಿಲ್ಲವೆಂದು ಕೆಟ್ಟ ನಡತೆಯುಳ್ಳವರಿಗೆ ಹೇಳುವ ಮಾತು ಇದೆ. ಅದೂ ಅಲ್ಲದೆ ನಮ್ಮ ರಾಜ್ಯದ ಹಿಂದಿನ ಮುಖ್ಯ ಮಂತ್ರಿಗಳ 'ವಸ್ತ್ರ ಸಂಹಿತೆ'ಯೆಂಬ ಕಾರಣವೂ ಉಂಟಂತೆ!

ಇಷ್ಟೆಲ್ಲಾ ಎಚ್ಚರಿಕೆಗಳನ್ನು ತೆಗೆದುಕೊಂಡರೂ ಆಗುವ ಅನಾಹುತಗಳನ್ನು ತಪ್ಪಿಸಲಾಗದಿದ್ದರೆ 'ವಿಧಿ'ಯನ್ನು ಬೆಟ್ಟು ಮಾಡಿ ತೋರಿಸಬೇಕಾಗುತ್ತೆ. ಕವಿ ನಾಗಚಂದ್ರ ಸೀತೆಯ ಮೇಲೆ ಕಣ್ಣಿಟ್ಟ ರಾವಣನ ಬಗ್ಗೆ ಸಾಫ್ಟ್ ಕಾರ್ನರ್ ಆಗಿ

''ಅಬ್ಧಿಯುಮೊರ್ಮೆ ಕಾಲವಶದಿಂ
ಮರ್ಯಾದೆಯಂ ದಾಂಟದೆ'' ಎನ್ನುತ್ತಾನೆ.


ಸುರುದ್ರೂಪಿ ಸೀತೆಯನ್ನು ನೋಡಿ ರಾವಣ ಇಷ್ಟಪಟ್ಟಿದ್ದು, ಶಾಂತವಾಗಿದ್ದ ಸಮುದ್ರವೂ ಒಮ್ಮೊಮ್ಮೆ ವಿಧಿಲೀಲೆಯಿಂದ ಎಲ್ಲೆಯನ್ನು ದಾಟುವುದಿಲ್ಲವೆ? ಎಂದು ಪ್ರಶ್ನಿಸುತ್ತಾನೆ. ಇನ್ನೂ ಹುಲುಮಾನವರು ಪ್ರಚೋದನಕಾರಿ ಉಡುಪು ಅಥವಾ ಪ್ರಚೋದನಕಾರಿ ಬರವಣಿಗೆ ಇರುವ ಟೀ ಶರ್ಟ್, ಹಾಗೂ ಬಿಗಿ ಉಡುಪಿನಿಂದ ಆಕರ್ಷಿಸಿದರೆ ಅಪಾಯವೆಂದು ಘನಸರ್ಕಾರ 'ವಸ್ತ್ರ ಸಂಹಿತೆ' ಜಾರಿಗೆ ತಂದಿದೆ. ಒಂದು ಶಿಸ್ತು ಇನ್ನೊಂದು ಭ್ರಷ್ಟಾಚಾರ ಹತೋಟಿ ಬಗ್ಗೆ ಚಿಂತಿಸಿರುವುದು ಗಮನೀಯ. ಹೀಗೆ ನಮ್ಮ ಮುಖ್ಯಮಂತ್ರಿ ಹೆಗಲಿನ ಮೇಲೆ ಇರುವ ಟವಲನ್ನು ಸೊಂಟಕ್ಕೆ ಕಟ್ಟಿ (ಟೊಂಕಕಟ್ಟಿ) ನಿಂತಿರುವುದು ಸ್ವಾಗತಾರ್ಹ.

ಈ ಡ್ರೆಸ್ ಕೋಡಿನಿಂದ ಆಡಳಿತ ಯಂತ್ರಕ್ಕೆ ಒಂದು ಕೋಡು (ಹೆಮ್ಮೆ) ಬಂದಿದೆ. ನಿಘಂಟಿನ ಪ್ರಕಾರ ಕೋಡು ಎಂದರೆ 'ಭಯ' ವೆಂಬ ಅರ್ಥವೂ ಅನ್ವರ್ಥವಾಗಿದೆ.

✵

---

## ಶಮಿಯ ನಂಟು



ದಸರೆಯ ಉತ್ಸವಕ್ಕೆ ಶಮಿಯ ನಂಟೂ ಉಂಟು. ವಿಜಯದ ಸಂಕೇತ ಶಮಿ. ಆದ್ದರಿಂದಲೇ ದಸರೆಯ ಉತ್ಸವದ ಕಡೆಯ ದಿನದ ಸಂಭ್ರಮವನ್ನು ವಿಜಯದಶಮಿ ಎಂದು ಆಚರಿಸಲಾಗುತ್ತಿದೆ. ಅದು ವಿಜಯದ ಶಮಿಯೂ ಹೌದು ವಿಜಯ ದಶಮಿಯೂ ಹೌದು. ವಿಜಯದ ಶಮಿಯೇ ವಿಜಯದಶಮಿಯಾಗಿದೆ. ಶಮಿಯ (ಬನ್ನಿಯ) ಎಲೆಗಳನ್ನು ಸುವರ್ಣವೆಂದು ಬಗೆದು ಪರಸ್ಪರ ಹಂಚುವ ಪದ್ಧತಿಯೂ ರೂಢಿಯಲ್ಲಿದೆ. ಈ ಬಗೆಯ ಸುವರ್ಣ ಹಂಚುವ ಪದ್ಧತಿ ರಘುವಂಶದ ರಾಜರಿಂದ ಪ್ರಾರಂಭವಾಯಿತು. ಅಲ್ಲಿಂದಲೇ ಶಮಿವೃಕ್ಷದ ಪೂಜೆಯೂ ಪ್ರಾರಂಭವಾಯಿತು. ಶಮಿಗೆ ನಮ್ಮ ಆಯುರ್ವೇದದಲ್ಲಿಯೂ ಪ್ರಮುಖ ಸ್ಥಾನವಿದೆ. ಅದರಲ್ಲಿ ನಂಜುನಾಶದ ಸಾಮರ್ಥ್ಯವಿದೆ (Antiseptic)

# ಎಂಥಾ ಗೊಣಗಾಟ!!

**- ಸಹನಾ ಪ್ರಸಾದ್**

"ಅಯ್ಯೋ, ನನಗೆ ಇಂಥಾ ಮಾವ ಸಿಗಬಾರದಿತ್ತೆ! ಛೇ, ನನ್ನ ಹಣೆಬರಹವೇ ಇಷ್ಟು" ಸೀನ ಹೇಳುತ್ತಲೇ ಇದ್ದ.

ಯಾರೂ ಗಮನ ಕೊಡದೆ ತಮ್ಮ ತಮ್ಮ ಕೆಲಸದಲ್ಲಿ ಮಗ್ನರಾಗಿದ್ದಾರೋ ಅಥವಾ ಆ ರೀತಿ ನಟಿಸಿಟ್ಟಿದ್ದರೋ ಎಂದು ಸಹ ಯೋಚಿಸದೆ ತನ್ನ ಪಾಡಿಗೆ ತಾನು ಹೇಳುತ್ತಲೇ ಇದ್ದ. ಅವನ ಬುದ್ಧಿಯೇ ಇಷ್ಟು, "ಅಯ್ಯೋ" ಎಂದು ಶುರುಮಾಡಿ ಗೊಣಗುತ್ತಲೇ ಇರುತ್ತಾನೆ. "ನಂಗೆ ಎಷ್ಟು ಕಷ್ಟ, ನಾನೆಷ್ಟು ದುಃಖಿ. ನನಗೆ ಇದು ಸಿಗಬಾರದಿತ್ತೆ. ಅವರಿಗೆಲ್ಲ ಎಷ್ಟು ಮಜಾ, ನಾನೇ ಪಾಪಿ" ಎಂದು ಅವನ ಹಾಡು. ತಲೆ ಚಿಟ್ಟು ಹಿಡಿಯುವವರೆಗೂ ಕೇಳಿ ಎಲ್ಲ ಜಾಗ ಖಾಲಿ ಮಾಡಿದರೂ ಅವನಿಗೆ ಅರ್ಥವಾಗುವುದಿಲ್ಲ, ಅದಕ್ಕೂ ಗೊಣಗುತ್ತಾನೆ. "ಅಯ್ಯೋ, ನನ್ನನ್ಯಾರೂ ಅರ್ಥಮಾಡಿಕೊಳ್ಳುವವರಿಲ್ಲವಲ್ಲ" ಅವನ ಪ್ರಲಾಪನೆ ಮುಂದುವರೆಯುತ್ತಲೇ ಇರುತ್ತದೆ.

> ತನಗೆ ಜೀವನದಲ್ಲಿ ಬಹಳ ಅನ್ಯಾಯವಾಗಿದೆಯೆಂದು ಬಲವಾಗಿ ನಂಬಿ, ಅದನ್ನು ಸರಿಪಡಿಸುವ ಒಂದೇ ದಾರಿಯೆಂದರೆ ಗೊಣಗುವುದು ಎಂದು ಭದ್ರವಾಗಿ ನಂಬಿದ್ದ ಸೀನ.

"ಬೇಡವೋ ಸೀನ, ಈ ರೀತಿ ಬೇಜಾರು ಮಾಡಿಕೊಂಡಿರುವುದು ಸರಿಯಲ್ಲ, ದೇವರು ನಿನಗೆಷ್ಟು ಸುಖಕೊಟ್ಟಿದ್ದಾನೆ" ಎಂದು ಯಾರಾದರೂ ಹೇಳಿದರೆ ಇನ್ನೂ ಜಾಸ್ತಿಯಾಗುತ್ತಿತ್ತು. "ಅಯ್ಯೋ ನಿಮಗೇನು ಗೊತ್ತು ನನ್ನ ವ್ಯಥೆ. ನನ್ನ ಹೆಂಡತಿಯ ಕೈ ಅಡುಗೆ ಒಮ್ಮೆ ರುಚಿ ನೋಡಿ, ಸ್ವಲ್ಪ ಕಾಲ ಅವಳೊಂದಿಗೆ ಇದ್ದು ನೋಡಿ, ಅವಳು ಹಾಕುವ ಸೆಂಟ್ ವಾಸನೆ ಸಹಿಸಿ ಆಮೇಲೆ ಹೇಳಿ ನನ್ನ ಅದೃಷ್ಟದ ಕಥೆ" ಕೆಲವು ಕಿಡಿಗೇಡಿ ಗೆಳೆಯರು "ಹೌದೇನೋ ಸೀನ, ಛೇ. ನಾವೇನೋ ತಿಳಿದಿದ್ದೆವು. ಯಾವಾಗ ನಿನ್ನ ಹೆಂಡತಿಯ ಜತೆ ಇರಬೇಕು? ಅರಿಯಬೇಕು?" ಅಮಾಯಕರಂತೆ ಕೇಳಿದರೂ, ಅವನಲ್ಲಿಗೆ ನಿಲ್ಲಿಸುವವನೇ? "ಅಯ್ಯೋ ನನ್ನ ಬಾಸ್ ನೋಡಿ, ಯಾವಾಗಲೋ ಒಮ್ಮೆ ತಪ್ಪು ಮಾಡಿದರೂ ನಾನೇನೋ ದಡ್ಡ, ಗೂಬೆ ಎನ್ನುವ ಹಾಗೆ ಮಾತಾಡುತ್ತಾರೆ. ಅವರ ಮಗಳು ನನ್ನನ್ನು ಕಣ್ಣೆತ್ತೂ ನೋಡುವುದಿಲ್ಲ, ನಾನೆಷ್ಟು ಆಸೆ ಪಟ್ಟಿದ್ದೆ. ಅವಳನ್ನೇ ಮದುವೆಯಾಗಿ ಈ ಕಂಪನಿಯ ಮಾಲೀಕನಾಗಲು, ಎಲ್ಲ ಆ ವಿವೇಕನ ಪಾಲಿಗಾಯ್ತು. ನಾನು ಗುಮಾಸ್ತನಾಗೆ ಉಳಿದೆ" ಅಷ್ಟರಲ್ಲಿಯೇ ಎಲ್ಲರೂ ಅಲ್ಲಿಂದ ಜಾಗ ಖಾಲಿ ಮಾಡಿರುತ್ತಿದ್ದರು.

ಈ ರೀತಿ ಗೊಣಗುವುದನ್ನು ಬಿಟ್ಟರೆ ಸೀನ ಒಳ್ಳೆಯವನೆ. "ಸ್ವಲ್ಪ ಅಡ್ಜಸ್ಟ್ ಮಾಡು" ಎಂದು ಯಾರೂ ಹೇಳಬೇಕಾದ್ದೆ ಇಲ್ಲ, ದೋಸೆ ಕರ್ರಗಾದರೂ, ಹುಳಿ ಸೀದಿದ್ದರೂ, ಅನ್ನ

ಮುದ್ದೆಯಾದರೂ ತಿನ್ನುತ್ತಾನೆ. ತನ್ನನ್ನು ಬಿಟ್ಟು ಗೆಳೆಯರೆಲ್ಲ ಬಾರಿಗೆ ಹೋದರೂ ಸುಮ್ಮನಿರುತ್ತಾನೆ. ತನ್ನ ಬಳಿ ದುಡ್ಡಿಲ್ಲದಿರುವುದರಿಂದ ತನಗೆ ಜೀವನದಲ್ಲಿ ಬಹಳ ಅನ್ಯಾಯವಾಗಿದೆಯೆಂದು ಬಲವಾಗಿ ನಂಬಿ. ಅದನ್ನು ಸರಿಪಡಿಸುವ ಒಂದೇ ದಾರಿಯೆಂದರೆ ಗೊಣಗುವುದು ಎಂದು ಭದ್ರವಾಗಿ ನಂಬಿ, ಅದನ್ನೇ ಪಾಲಿಸುತ್ತಾ ಬಂದಿದ್ದನು. ಕೋಪ, ತಾಪ ಅವನ ಹತ್ತಿರವೂ ಸುಳಿಯುತ್ತಿರಲಿಲ್ಲ. ಅವನನ್ನು ಗೊಣಗಲು ಬಿಟ್ಟು, ಎಲ್ಲರೂ ತಮ್ಮ ಕೆಲಸ ಮಾಡಿಕೊಂಡಿರುವುದನ್ನು ರೂಢಿಸಿಕೊಂಡಿದ್ದರು.

ಎಲ್ಲರಿಗಿಂತ ಜಾಣೆ ಅವನ ಹೆಂಡತಿ ಪಿಂಕಿ. ''ಸೀತಾ ಲಕ್ಷಮ್ಮ'' ಎಂದು ಇಟ್ಟ ಹೆಸರನ್ನು ''ಪಿಂಕಿ'' ಎಂದು ಬದಲಿಸಿ, ಅದನ್ನು ದಾಖಲಿಸಿ, ಎಲ್ಲರೂ ತನ್ನನ್ನು ''ಪಿಂಕಿ'' ಎಂದೇ ಕರೆಯಬೇಕು ಎಂಬ ಆಜ್ಞೆ ಹೊರಡಿಸಿದ್ದಳು. ''ಪಿಂಕಿ-ಮಂಕಿ'' ಎಂದು ತಮಾಷೆ ಮಾಡಲು ಹೋಗಿ ಸೀನ ಒಂದುವಾರ ಪೂರ್ತಿ ಹೋಟೆಲೂಟ ಮಾಡಬೇಕಾಗಿ ಬಂದಿತ್ತು. ಆವಾಗ ಅವನ ಗೊಣಗಾಟ ಮಿತಿಮೀರಿ, ಹೋಟೆಲ್ಲಿನ ಶಾಮಣ್ಣ ಅವನಿಗೆ ಬುದ್ಧಿ ಹೇಳಲು ಪ್ರಯತ್ನಿಸಿ, ಸೋತು, ಗ್ರಾಹಕರೆಲ್ಲ ಬರುವುದನ್ನೇ ನಿಲ್ಲಿಸಲು ಶುರು ಮಾಡಿದಾಗ ಕೊನೆಗೆರಡು ದಿನ ಹೋಟೆಲ್ಲನ್ನೇ ಮುಚ್ಚಿದ್ದರು. ಬೇರೆ ಹೋಟೆಲ್ಲಲ್ಲಿ ತಿಂದು ಹೊಟ್ಟೆ ಕೆಟ್ಟು, ತಲೆಯೂ ಕೆಟ್ಟ ಮೇಲೆ ಪಿಂಕಿ ಅಡುಗೆ ಮಾಡಲು ಶುರು ಮಾಡಿದ್ದಳು. ಪುಟ್ಟ ನಗರದಲ್ಲಿ ಚಿಕ್ಕ ಆಫೀಸಿನಲ್ಲಿ ಇದು ಎಲ್ಲರಿಗೂ ಗೊತ್ತಾಗಿ ನಗಾಡಿದ್ದರು.

''ನೋಡೇ ಪಿಂಕಿ, ನಾನು ಹಾಗೂ ನನ್ನ ಗಂಡ ಒಂದು ವಾರಕ್ಕೆ ಊರಿಗೆ ಹೋಗುತ್ತಿದ್ದೇವೆ, ಮನೆಯಲ್ಲಿ ನನ್ನ ಮಗ ಒಬ್ಬನೇ. ನೀನು ಅವನಿಗೆ ಉಪಹಾರ, ಊಟ ಕೊಡಲಾಗುತ್ತದೆಯೇ? ನಿನ್ನ ಗಂಡ ರಾತ್ರಿ ಇಲ್ಲೇ ಮಲಗಿದ್ದು ಬೆಳಗ್ಗೆ ಕೆಲಸಕ್ಕೆ ಹೋದರೆ ನಾವು ಬಂದ ಮೇಲೆ ನಿನಗೆ ಸ್ವಲ್ಪ ದುಡ್ಡು ಕೊಡುತ್ತೇನೆ'' ಎದುರು ಮನೆ ಉಷ ಹೇಳಿದ ಮೇಲೆ ಪಿಂಕಿ ಖುಷಿಯಾಗಿ ಒಪ್ಪಿಕೊಂಡಳು. ಉಷಳ ಮನೆಯ ವೈಭವ, ಅಂದ ಚೆಂದ ನೋಡಿ ಸೀನನ ಗೊಣಗಾಟ ಹೆಚ್ಚಾಯ್ತು. ಅಷ್ಟರಲ್ಲಿಯೇ ಒಬ್ಬ ತಲೆ ಕೆರೆದುಕೊಂಡು, ಬಟ್ಟೆ ಹರಿದುಕೊಂಡು ಒದ್ದಾಡಿದ್ದ ಗುಟ್ಟು ಹೊರಬಿದ್ದು, ಊರಿಗೆ ಊರೇ ನಕ್ಕಿತ್ತು. ರಾತ್ರಿ ಉಷಳ ಮನೆಗೆ ಕದಿಯಲು ಬಂದ ಕಳ್ಳ ಸೀನನ ಗೊಣಗಾಟ ಕೇಳಿ, ತಲೆ ಕೆಟ್ಟು, ಕಳ್ಳತನ ಇರಲಿ, ತನ್ನನ್ನೇ ಮರೆತು ಹುಚ್ಚನಾಗಿದ್ದ. ಸ್ವಲ್ಪ ದಿನದ ಮೇಲೆ ಅವನು ಸರಿ ಹೋದರೂ ಸೀನನ ಗೊಣಗಾಟ ನಿರಂತರವಾಗಿ ನಡೆದಿತ್ತು. ಹುಟ್ಟುಗುಣ ಸುಟ್ಟರೂ ಹೋಗುವುದೇ?

✵

---

**ಹೀಗೊಂದು ಶುಭಾಷಯ**

ನಿಮ್ಮ ಸುಖ ಸಂತೋಷಗಳು ಪೆಟ್ರೋಲ್ ಬೆಲೆಯಂತೆಯೇ ಏರುತ್ತಿರಲಿ
ನಿಮ್ಮ ದುಃಖ ದುಮ್ಮಾನಗಳು ರೂಪಾಯಿ ಬೆಲೆಯಂತೆ ಪಾತಾಳಕ್ಕಿಳಿಯಲಿ
ನಿಮ್ಮ ನೆಮ್ಮದಿ, ಶಾಂತಿ ಇವುಗಳು ಭಾರತದಲ್ಲಿ ಭ್ರಷ್ಟಾಚಾರ ಹರಡುವಂತೆ ಹರಡಲಿ

# ಆತ್ಮವಿಶ್ವಾಸ ಹೆಚ್ಚು ಮಾಡಲು....

- ಎಚ್. ಗೋಪಾಲಕೃಷ್ಣ

**ಬ**ಡಾವಣೆಯ ಮಧ್ಯದಲ್ಲಿಯೇ ಕೊಳಕು ನೀರು ಶೇಖರಣೆಯ ವ್ಯವಸ್ಥೆ ಇತ್ತು. ನೀರು ಸಂಸ್ಕರಣೆಯಾಗಿ ಶೇಖರವಾಗುವ ಕೆರೆಯಲ್ಲಿ ದೋಣಿ ವಿಹಾರವನ್ನು ಸರ್ಕಾರ ಶುರುಮಾಡಿತ್ತು. ಕೆಲವು ವರ್ಷ ದೋಣಿ ವಿಹಾರವೂ ನಡೀತು. ಒತ್ತಡ ಹೆಚ್ಚಾದ್ದರಿಂದ ಸಂಸ್ಕರಣೆ ಕಾರ್ಯ ಸುಗಮವಾಗಿ ಆಗದೇ ಇಡೀ ಬಡಾವಣೆ ಕೊಳಕು ನೀರಿನ ದುರ್ವಾಸನೆಯಿಂದ ಆವೃತವಾಯಿತು. ಬದುಕು ನರಕ ಅನಿಸಲು ಆರಂಭವಾದಾಗ ನಿವಾಸಿಗಳು ದೂರು ಹೊತ್ತು ಕಂಬ ಸುತ್ತು ಹಾಕಿದರು. ಯಾವತ್ತೋ ಒಂದು ದಿವಸ ದೇವರು ಕಣ್ಣು ಬಿಟ್ಟ!

ಸಂಸ್ಕರಣೆ ಘಟಕ ಜಾಗ ಬದಲಾಯಿಸಿಕೊಂಡಿತು. ಕೆರೆ ಇದ್ದ ಜಾಗ ಕೆರೆಯಾಗೇ ಉಳಿಯಿತು ಮತ್ತು ಅದನ್ನ ಮತ್ತೂ ಸುಂದರವಾಗಿ ಮಾಡಲು ಯೋಜನೆಗಳು ಕಾರ್ಯಗತವಾದವು. ಹಂತಹಂತವಾಗಿ ಒಂದೊಂದೇ ಯೋಜನೆ ಜಾರಿಯಾಗುತ್ತಾ ಬಂದಹಾಗೆ ಕೆಲವು ಸಮಸ್ಯೆಗಳು ಹುಟ್ಟಿದವು. ಒಂದು ಪಾರ್ಕು ಮಾಡುವ ಕೆಲಸ ಆರಂಭವಾದಾಗ ಹಳೆಯ ಮರಗಳನ್ನ ತೆಗೆಯಲೇಬೇಕಾಯಿತು. ಪರಿಸರವಾದಿಗಳು ಮರಗಳನ್ನ ತೆಗೆದರೆ ಅಲ್ಲಿರುವ ಪುಟ್ಟಪುಟ್ಟ ಹಕ್ಕಿಗಳ ಗತಿ ಏನು ಅವನ್ನ ತೆಗೀಬಾರದು ಅಂತ ತಗಾದೆ ತೆಗೆದರು. ಹಳೇ ಮರಗಳನ್ನ ತೆಗೆದು ಹೊಸಾ ಹೊಸಾ ಸಸಿಗಳನ್ನೂ ಹಾಕ್ತೀವಿ, ಇಲ್ಲೊಂದು ಕಾಡನ್ನೇ ಬೆಳೆಸ್ತೀವಿ... ಅಂತ ಅವರ ಮನ ಒಲಿಸುವ ಹೊತ್ತಿಗೆ ಯಾಕಾದರೂ ಈ ಕೆಲಸ ಕೈಗೆ ತೆಗೆದುಕೊಂಡೆವೋ ಅಂತ ಸಂಬಂಧ ಪಟ್ಟವರಿಗೆ ಬೇಸರ ಬಂದುಹೋಗಿತ್ತು.

ಕೆರೆಯಲ್ಲಿ ತುಂಬಿದ್ದ ಹೂಳು ತೆಗೆಸಿ ಆಳ ಮಾಡಿಯಾಯಿತು. ನಂತರ ಸುತ್ತಲೂ ಏರಿ ಕಟ್ಟಿ ಅದಕ್ಕೆ ಜನ ಓಡಾಡುವ ಹಾಗೆ ಆಕಾರವನ್ನೂ ಕೊಟ್ಟಾಯಿತು. ಪಾರ್ಕಿನ ಸುತ್ತಲೂ ಬೇಲಿ ಎದ್ದಿತು. ರಸ್ತೆಗೆ ಬಿದ್ದ ಮಳೆ ನೀರು ಹರಿದು ಕೆರೆ ಸೇರಿತು.

ನಿಧಾನಕ್ಕೆ ಮೊದಲು ಬಡಾವಣೆಯ ಹೆಂಗಸರು ಪಾರ್ಕಿನಲ್ಲಿ ವಾಕಿಂಗ್ ಆರಂಭಿಸಿದರು, ನಂತರ ಮಕ್ಕಳೂ ಸೇರಿದವು. ಅದರ ನಂತರ ನಿವೃತ್ತರೂ ಪಾರ್ಕಿನ ಉಪಯೋಗ ಪಡೆಯಲು ಶುರುಮಾಡಿದರು. ಜನರ ಆರೋಗ್ಯದ ಬಗ್ಗೆ ಕಾಳಜಿ ಹೆಚ್ಚಿತು. ಬೆಳಗಿನ ಜಾವ ಹೆಂಗಸರ ಗುಂಪು, ಗಂಡಸರ ಗುಂಪು ಅವರವರ ವಯೋಮಾನಕ್ಕೆ ತಕ್ಕ ಹಾಗೆ ವಾಕಿಂಗು, ಜಾಗಿಂಗು, ಸ್ಕಿಪ್ಪಿಂಗು ಮಾಡುತ್ತಾ ಮರಗಿಡಗಳಲ್ಲಿನ ಹಕ್ಕಿಗಳನ್ನ ಬೇಗ ಏಳುವ ಹಾಗೆ ಮಾಡಿಬಿಟ್ಟರು. ಹಕ್ಕಿಗಳ ಚಿಲಿಪಿಲಿ ಜತೆಗೆ ಮನುಷ್ಯರ ಕೊರಳೂ ಸೇರಿ ಗಿಡಮರಗಳ ಕೊರಳೊಳಗಿಂದ ಹೊರಟಿತು ಜುಗಲ ಹಾಡು!

ಅರವತ್ತು ಮೀರಿದ ಹೆಂಗಸರು ಚೂಡೀದಾರು, ಶರ್ವಾಣಿ ತೊಟ್ಟು, ಅಷ್ಟೇ ವಯಸ್ಸಿನ ಗಂಡಸರು ಟೀ ಷರ್ಟು, ಜೀನ್ಸ್ ಪ್ಯಾಂಟು, ಟ್ರ್ಯಾಕ್ ಸೂಟು ಧರಿಸಿ, ತಲೆಗೊಂದು ಫೆಲ್ಟ್ ಟೋಪಿ ಏರಿಸಿ ವೇಗವಾಗಿ ಪಾರ್ಕಿನ ಏರಿಯ ಮೇಲೆ ಹೋಗುವುದನ್ನು ನೋಡುವುದೇ ಒಂದು ಖುಷಿ. ಅದರಲ್ಲೂ ಕೆಲವರು ಮಿಕ್ಕವರಿಗಿಂತಲೂ ತಾವು ಹೆಚ್ಚು ಫಿಟ್ ಆಗಿದ್ದೇವೆ ಎಂದು ತೋರಿಸಲು ಮಿಕ್ಕವರನ್ನು ಹಿಂದೆ ಹಾಕಿ ಮುನ್ನುಗ್ಗಿ ಹೋಗುವುದು ಕಂಡರೆ ಈ ವಯಸ್ಸಲ್ಲೂ ಮುದುಕಿ ಪರವಾಗಿಲ್ಲವೇ ಹೆಂಗೆ ಓಡುತ್ತೆ ಅಂತ ಗಂಡಸರು ಅಂದುಕೊಂಡರೆ, ಅದೇ ರೀತಿ ಮುದುಕ ಹೋದಾಗ ಹೆಂಗಸರು ಪರವಾಗಿಲ್ಲವೇ ಮುದುಕ... ಅಂದುಕೊಳ್ಳುವ ಹಾಗೆ ಪೈಪೋಟಿ ಮೇಲೆ ಓಡಾಟ ನಡೀತಿತ್ತು.

ಈ ಸಮಯ ದಲ್ಲಿಯೇ ನೀಳಕಾಯದ ತೆಳು ಶರೀರದ ಮೂವತ್ತರ ಆಸುಪಾಸಿನ ಯುವಕ ನಮ್ಮ ಪಾರ್ಕಿನಲ್ಲಿ ಕಾಣಿಸಿಕೊಂಡ. ಏರಿಯಾಗೆ ಬಂದ ಹೊಸಾ ಹುಡುಗನ ಬಗ್ಗೆ ಆಸಕ್ತಿ ಸಹಜವಾಗಿಯೇ ನಮ್ಮವರಲ್ಲೂ ಹುಟ್ಟಿತು.

ಯುವಕ ಪಾರ್ಕಿನಲ್ಲಿ ಓಡುತ್ತಿದ್ದ, ನಡೀತಿದ್ದ ಮತ್ತು ವ್ಯಾಯಾಮವನ್ನೂ ಮಾಡುತ್ತಿದ್ದ. ಆತ ಓಡಬೇಕಾದರೆ ಅವನದ್ದೇ ಒಂದು ನಿಯಮ – ಯಾರನ್ನೂ ಹಿಂದೆ ಹಾಕಿ ಓಡುವುದಿಲ್ಲ. ಓಡುವವರ ಹಿಂದೆ ಈತನದ್ದೂ ನಿಧಾನದ ಓಟ, ನಡೆಯುವವರ ಜತೆಗೂ ಇವನದ್ದು ಅವರದ್ದೇ ವೇಗ.... ಹೀಗೆ. ಇದೇನು ಇವನು ಇಷ್ಟು ವಿಚಿತ್ರವಾಗಿ ಆಡ್ತಾನೆ – ವಯಸ್ಸಿನ ಹುಡುಗ ಜೋರಾಗಿ ಓಡಬಾರದೇ? ವೇಗವಾಗಿ ನಡೀಬಾರದೇ ಅಂತ ಕೆಲವರಿಗೆ ಅವನ ಬಗ್ಗೆ ಕನಿಕರ. ಪಾಪ ಅದೇನು ರೋಗವೋ ಎನ್ನುವ ಅನುಕಂಪ ಬೇರೆ....

ಯುವಕ ಮತ್ತಷ್ಟು ಯುವಕರನ್ನು ಸೇರಿಸಿ ಅವರಿಗೆ ವ್ಯಾಯಾಮ ಹೇಳಿಕೊಡುತ್ತಿದ್ದ. ವಯಸ್ಸಾದವರಿಗೆ ಹೆಚ್ಚು ಶ್ರಮವೆನಿಸದ ಸುಲಭ ವ್ಯಾಯಾಮಗಳನ್ನು ಯೋಗಾಸನದ ಪ್ರಾಥಮಿಕ ಪಾಠಗಳನ್ನೂ ಕಲಿಸಿದ.

ಯುವಕ ನಿಧಾನಕ್ಕೆ ನಮ್ಮಗಳಿಗೆ ಪರಿಚಿತನಾಗುತ್ತಾ ಹೋದ ಹಾಗೆ ಅವನ ಕುರಿತು ಹಲವಾರು ವಿಷಯಗಳು ತಿಳಿಯುತ್ತಾ ಬಂತು. ಆತ ಓಟಗಾರ, ಕಾಲೇಜಿನ, ವಿಶ್ವವಿದ್ಯಾಲಯದ ಹಲವಾರು ಓಟದ ಸ್ಪರ್ಧೆಗಳಲ್ಲಿ ಭಾಗವಹಿಸಿರುವವನು. ಕಳೆದ ವರ್ಷ ಯಾವುದೋ ಇದೇ ರೀತಿಯ ಸ್ಪರ್ಧೆಯಲ್ಲಿ ಜತೆಯಲ್ಲಿ ಓಡುವಾತ ಇವನನ್ನು ನೂಕಿದ. ಇವನು ಆಯತಪ್ಪಿ ಬಿದ್ದನಂತೆ – ಕಾಲಿನ ಮೂಳೆ ಮುರೀತು – ಈಗ ಚೇತರಿಸಿಕೊಳ್ಳುತ್ತಿದ್ದಾನೆ, ಮತ್ತೆ ಸ್ಪರ್ಧೆಗೆ ತಯಾರು ಮಾಡಿಕೊಳ್ಳುತ್ತಿದ್ದಾನೆ. ಯಾರೋ ತಳ್ಳಿದ್ದರಿಂದ ಇವನಿಗೆ ಆದ ತೊಂದರೆ ಇವನ ಮನಸ್ಸಿನಿಂದ ಇನ್ನೂ ಮಾಯವಾಗಿಲ್ಲ. ಅದಿನ್ನೂ ಹಾಗೇ ಕೊರೀತಿದೆ.

ನಮ್ಮ ಪಾರ್ಕಿಗೆ ಬಂದಾಗ ಇಲ್ಲಿ ಇವನಿಗಿಂತಲೂ ಹೆಚ್ಚು ವಯಸ್ಸಾದವರು ನಡೆಯೋದು, ಓಡುವುದು ನೋಡಿ ಮೆಚ್ಚಿಕೆಯಾಯಿತಂತೆ. ಹೆಚ್ಚೂ ಕಡಿಮೆ ಎಲ್ಲರೂ ನನ್ನ ತಾತನ ವಯಸ್ಸಿನವರು – ಅವರ ಜತೆ ಹೆಜ್ಜೆ ಹಾಕುವುದು ಒಂದು ರೀತಿಯ ಆನಂದ ನೀಡುವ

ಅನುಭವ... ಅವರ ಎದೆಯಲ್ಲಿ ವಿಶ್ವಾಸ ತುಂಬಬೇಕು ಅಂದರೆ ಅವರಿಗಿಂತಲೂ ತಾನು ನಿಧಾನವಾಗಿರಬೇಕು ಅನಿಸಿತಂತೆ! ಹುಡುಗನಿಗಿಂತಲೂ ತಾನು ವೇಗವಾಗಿ ಓಡ್ತಾ ಇದೀನಿ,ವೇಗವಾಗಿ ನಡೀತಾ ಇದೀನಿ ಅನ್ನುವ ಭಾವನೆ ಮನಸ್ಸಿನಲ್ಲಿ ತುಂಬಿಕೊಂಡರೆ ಎಂಥಹ ಮುದುಕರಿಗೂ ಹೆಚ್ಚು ಹುಮ್ಮಸ್ಸು ಬರುತ್ತೆ, ಆತ್ಮವಿಶ್ವಾಸ ಹೆಚ್ಚು ಆಗುತ್ತೆ ಅಂತ ಅವನ ಟ್ಯೂಟರು ಪಾಠ ಹೇಳಿದ್ದರಂತೆ... ಆ ಪಾಠವನ್ನು ಇಲ್ಲಿ ಪ್ರಯೋಗಿಸಿ ನೋಡುತ್ತಿದ್ದಾನಂತೆ.. ಎಲ್ಲರೂ ಪಾರ್ಕಿನಿಂದ ಹೋದಮೇಲೆ ನಾನೂ ನನ್ನ ಸ್ಪೀಡಿನಲ್ಲೇ ಓಡ್ತೀನಿ ಸಾರ್, ಆಗ ಯಾರೂ ನನಗಿಂತ ಹೆಚ್ಚು ವೇಗವಾಗಿ ಓಡ್ತಿದ್ದಾನೆ ಅಂತ ವಿಶ್ವಾಸ ಕುಂದಿಸಿಕೊಳ್ಳುವವರು ಇರಲ್ಲ ನೋಡಿ....

ಜಗತ್ತು ಏನು ವಿಚಿತ್ರ ಅನ್ನಿಸಿತು!

✵

---

## ಯಾರನ್ನು ಕೇಳುವುದು ಶಿವಾ?

**ಸರ್ಕಾರ ಈರುಳ್ಳಿಯನ್ನು ಮಾರುವುದಿಲ್ಲ. ವ್ಯಾಪಾರಿಗಳನ್ನು ಕೇಳಿ.**

**ಕೇಂದ್ರ ಸಚಿವ ಕಪಿಲ್ ಸಿಬಲ್ – ಸುದ್ದಿ**

ಮತ್ತಿನ್ನೇನು ಸಿಬಲ್‌ಜಿ?

| | | |
|---|---|---|
| **ಸರ್ಕಾರ ಮಹಿಳೆಯರ ಮೇಲೆ ಅತ್ಯಾಚಾರ ಮಾಡುವುದಿಲ್ಲ** | : | ಅತ್ಯಾಚಾರಿಗಳನ್ನು ಕೇಳಿ |
| **ಸರ್ಕಾರ ಉಗ್ರರೊಂದಿಗೆ ವ್ಯವಹರಿಸುವುದಿಲ್ಲ** | : | ಪಾಕಿಸ್ತಾನವನ್ನು ಕೇಳಿ |
| **ಸರ್ಕಾರ ಅಪರಾಧಗಳನ್ನು ನಿಯಂತ್ರಿಸುವುದಿಲ್ಲ** | : | ಅಪರಾಧಿಗಳನ್ನು ಕೇಳಿ |
| **ಸರ್ಕಾರ ಷೇರುಪೇಟೆಯನ್ನು ನಡೆಸುವುದಿಲ್ಲ** | : | ವಿದೇಶಿ ಹೂಡಿಕೆದಾರರನ್ನು ಕೇಳಿ |
| **ಸರ್ಕಾರ ತನ್ನ ನೀತಿಯನ್ನು ನಿಯಂತ್ರಿಸುವುದಿಲ್ಲ** | : | ಅಂಬಾನಿಗಳನ್ನು ಕೇಳಿ |
| **ಸರ್ಕಾರ ಕಲ್ಲಿದ್ದಲು ಕಡತಗಳನ್ನು ಇಟ್ಟುಕೊಳ್ಳುವುದಿಲ್ಲ** | : | ಹಳೆ ಪೇಪರ್ ಕೊಳ್ಳುವವರನ್ನು ಕೇಳಿ |
| **ಸರ್ಕಾರ ದೇಶವನ್ನು ನಡೆಸುತ್ತಿಲ್ಲ** | : | ಸೋನಿಯಾ ಗಾಂಧೀನ ಕೇಳಿ |
| **ಸರ್ಕಾರ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ** | : | ವಿರೋಧ ಪಕ್ಷಗಳನ್ನು ಕೇಳಿ |

**– ಇಂಟರ್‌ನೆಟ್‌ನಿಂದ**

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಳಿ

- ಮನೆ ಬಾಡಿಗೆಯದೇ ಇರಲಿ ಇರುವಷ್ಟು ದಿವಸ ನಿಮ್ಮದೇ ಅಲ್ಲವೆ?
- ನಾವೆಲ್ಲ ಮಾವಿನ ಹಣ್ಣು ತಿನ್ನುತ್ತೇವೆ. ಆದರೆ ನಮ್ಮಲ್ಲಿ ಎಷ್ಟು ಮಂದಿ ಮಾವಿನ ಗಿಡ ನೆಡುತ್ತೇವೆ.
- ಒಂದೇ ಸಾಹಿತ್ಯ ಏನು ಹೇಳುತ್ತದೆ ಎಂಬುದು ಮುಖ್ಯವಲ್ಲ, ಆ ಸಾಹಿತ್ಯದ ಓದು ನಮ್ಮನ್ನು ಯಾಕೆ ಕಾಡಿತು ಎಂಬುದು ಮುಖ್ಯವಾಗಿರುತ್ತದೆ.
- *Yoga is essentially a way of recreating the body so that it serves a higher purpose.*
- ಕೆಲವು ಮಾತು ಆಡಿ ಎಂಜಲು ಮಾಡಬಾರದು. ಸುಮ್ಮನೆ ಮನಸ್ಸಿನಲ್ಲಿ ಅಂದುಕೊಳ್ಳಬೇಕು.
- ರಾಮನಂಥವರು ಸಿಗದೇ ಹೋದರೆ ಯಾವ ಶಬರಿಯ ಬದುಕೂ ಭಾಗ್ಯವಾಗುವುದಿಲ್ಲ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಗಾಳಿ ದೀಪವನ್ನು ನಂದಿಸಬಹುದು ಆದರೆ ಬೆಂಕಿಗೆ ಜೀವ ತುಂಬುತ್ತದೆ.
- *There is nothing so useless as doing efficiently that which should not have been done at all.*
- ಈ ಸರ್ಕಾರ ಗುತ್ತಿಗೆದಾರರದ್ದು, ಗುತ್ತಿಗೆದಾರರಿಗೆ ಮತ್ತು ಗುತ್ತಿಗೆದಾರರಿಂದ.
- ಅರ್ಥ ಮಾಡಿಕೊಳ್ಳುವುದಕ್ಕೂ ಅರ್ಥ ಮಾಡಿಸುವುದಕ್ಕೂ ತುಂಬಾ ವ್ಯತ್ಯಾಸವಿದೆ.
- ಡಯಟ್ ಮಾಡಬೇಕೇ? ಹಾಗಾದರೆ ಆಹಾರ ಪದಾರ್ಥಗಳ ಬೆಲೆ ಪಟ್ಟಿಯ ಮೇಲೆ ಕಣ್ಣಾಡಿಸಿ, ಈಗ ಡಯಟ್ ಅನಿವಾರ್ಯ ಎಂದೆನಿಸುತ್ತದೆ ಅಲ್ಲವೆ?
- *If absolute power corrupts absolutely where does that leave God?*
- ಒಳ್ಳೆ ಮಾತುಗಾರ ಇತರರು ಆಡಿದ್ದನ್ನು ನೆನಪಿನಲ್ಲಿಟ್ಟುಕೊಳ್ಳುವವನಲ್ಲ ಆದರೆ ತಾನು ಆಡಿದ್ದನ್ನು ಬೇರೆಯವರು ನೆನಪಿನಲ್ಲಿಟ್ಟುಕೊಳ್ಳುವಂತೆ ಮಾಡುವವನು.
- ನಮ್ಮ ಚರ್ಮವನ್ನು ಕಪ್ಪು ಮಾಡುವ ಸೂರ್ಯ ಕೂದಲನ್ನೇಕೆ ಬೆಳ್ಳಗೆ ಮಾಡುತ್ತಾನೆ?
- *He was never present but his presence was never absent.*
- ಯಾರು ಬೋರ್ ಹೊಡೆಯುವುದಿಲ್ಲವೋ ಅವರಿಗೆ ಬೋರ್ ಆಗುವುದೇ ಇಲ್ಲವಂತೆ. ಹೌದೆ?
- ಆನಂದ ಎನ್ನುವುದು ಯಾವಾಗಲೂ ಸೆಕೆಂಡಿನ ಮುಳ್ಳೇ ಆಗಿರ್ತದೆ. ಸರಸರ ಸರೀತದೆ. ಕಷ್ಟ ಅನ್ನೋದು ತಾಸಿನ ಮುಳ್ಳಿದ್ದಂಗ. ಮುಂದಕ್ಕೋಡೋದೇ ಇಲ್ಲ. ಆದ್ರೆ ನಿಂದ್ರೂದು ಇಲ್ಲ ಅನ್ನೋದು ಅಷ್ಟೇ ಖರೆ.

# ಮೋದಿ ಟು ಮೋದಿ

**- ಬಿ.ಕೆ. ಗಣೇಶ್**

***ಎರಡು ಪ್ರತ್ಯೇಕ ಹುದ್ದೆಯಲ್ಲಿರುವ ಐಪಿಎಸ್ ಅಧಿಕಾರಿ ಭಾಸ್ಕರ ರಾವ್ ತಾವೇ ತಮಗೆ ಅಧಿಕೃತ ಪತ್ರ ಬರೆದು ಅದಕ್ಕೆ ತಾವೇ ಉತ್ತರ ಬರೆದ ಘಟನೆ ಈಚೆಗೆ ವರದಿಯಾಗಿತ್ತು. ಆ ಘಟನೆ ಆಧಾರದಲ್ಲಿ ಪ್ರಧಾನಿ ಪಟ್ಟದ ಆಕಾಂಕ್ಷಿ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದರೆ ಹೇಗಿರುತ್ತದೆ. ಈ ಕಾಲ್ಪನಿಕ ಪತ್ರ ಇಲ್ಲಿದೆ ನೋಡಿ.***

*ಇವರಿಗೆ,*

*ಶ್ರೀ ನರೇಂದ್ರ ಮೋದಿ,*
*ಹಾಲಿ ಮುಖ್ಯಮಂತ್ರಿ*
*ಗುಜರಾತ್*

ಸನ್ಮಾನ್ಯ ಮುಖ್ಯಮಂತ್ರಿ ಮೋದಿ ಅವರೇ,

ಈ ದೇಶದ ಪ್ರಧಾನಿಯಾಗಬೇಕೆಂದು ಕನಸು ಕಟ್ಟಿಕೊಂಡಿರುವ ನರೇಂದ್ರ ಮೋದಿ ಮಾಡುವ ಪ್ರಣಾಮಗಳು. ಈ ಮೂಲಕ ತಮಗೆ ಬಹಿರಂಗವಾಗಿ ಪತ್ರವೊಂದನ್ನು ಬರೆಯಲು ಸಾಕಷ್ಟು ಕಾರಣಗಳಿವೆ.

ಈಚೆಗೆ ನೀವು ಅಹಮದಾಬಾದ್‌ನಲ್ಲಿ ಮಕ್ಕಳ ಸಮಾವೇಶದಲ್ಲಿ ಮಾತನಾಡಿ, 2017ರವರೆಗೆ ನಾನು ಗುಜರಾತ್ ಮುಖ್ಯಮಂತ್ರಿಯಾಗಿಯೇ ಉಳಿಯುವೆ ಎಂದು ಹೇಳಿದ್ದೀರಿ. ಇದು ಒಂದು ಮಕ್ಕಳಾಟಿಕೆಯ ಹೇಳಿಕೆ ಆಗಿರಲಿಕ್ಕಿಲ್ಲ ಎಂದು ನಾನು ಭಾವಿಸುತ್ತೇನೆ. ನಿಜ, ನಿಮಗೆ ಗುಜರಾತ್ ಮುಖ್ಯಮಂತ್ರಿಯಾಗಿ ಇರಲು ಜನಾದೇಶ ಇರುವುದನ್ನು ನಾನು ಒಪ್ಪಿಕೊಳ್ಳುವೆ. ಆದರೆ, ಈ ದೇಶದ ಪ್ರಧಾನಿಯಾಗಬೇಕೆಂಬ ಜನಾದೇಶವೂ ನನಗೆ ಬರುತ್ತದೆ ಎನ್ನುವುದನ್ನು ನೀವು ಈ ಸಂದರ್ಭದಲ್ಲಿ ಮರೆತ ಹಾಗಿದೆ.

ಬಹುಶಃ, ಈ ನಿಮ್ಮ ಹೇಳಿಕೆಯ ಹಿಂದೆ ಪಕ್ಷದ ಉಕ್ಕಿನ ಮನುಷ್ಯ ಎಂದು ಹೇಳಿಕೊಂಡು ತಿರುಗಾಡುತ್ತಿರುವ ಲಾಲ್ ಕೃಷ್ಣ ಅಡ್ವಾಣಿ ಅವರಾಗಲಿ, ವಿರೋಧ ಪಕ್ಷದ ನಾಯಕಿ ಎಂದು ಹೇಳಿಕೊಂಡು ತಿರುಗಾಡುತ್ತಿರುವ ಸುಷ್ಮಾ ಸ್ವರಾಜ್ ಅವರಾಗಲಿ ಇಲ್ಲ ಎಂದು ನಾನು ಭಾವಿಸಬಹುದೇ?

ಈ ನಿಮ್ಮ ಒಂದು ಹೇಳಿಕೆ, ನಾನು ಬಹುವರ್ಷಗಳಿಂದ ಕಟ್ಟಿಕೊಂಡಿರುವ ಕೆಂಪುಕೋಟೆ ಕನಸನ್ನು ಒಂದೇ ಕ್ಷಣ ನುಚ್ಚುನೂರು ಮಾಡಿಬಿಟ್ಟಿದೆ. ಈ ಕಾರಣದಿಂದಲೇ ನಾನು

ಅಂಬಿಕಾಪುರದಲ್ಲಿ ಕೃತಕ ಕೆಂಪುಕೋಟೆ ನಿರ್ಮಿಸಿ ಭಾಷಣ ಮಾಡಿದ್ದೇನೆ ಮತ್ತು ಆ ಮೂಲಕ ನಾನಿನ್ನೂ ಪ್ರಧಾನಿ ಅಭ್ಯರ್ಥಿ ಎಂದು ಈ ದೇಶಕ್ಕೆ ಮತ್ತೊಮ್ಮೆ ಸಾರಿದ್ದೇನೆ. ದಯವಿಟ್ಟು ಇನ್ನು ಮುಂದೆಯಾದರೂ ನನ್ನ ಪ್ರಧಾನಿ ಹುದ್ದೆಯ ಹೆಜ್ಜೆಗೆ ತೊಡರುಗಾಲಾಗಬೇಡಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

ತಮ್ಮ ವಿಶ್ವಾಸಿ

ನರೇಂದ್ರ ಮೋದಿ, ಪ್ರಧಾನಿ ಪದವಿ ಆಕಾಂಕ್ಷಿ, ನವದೆಹಲಿ.

★★★★

ಇದಕ್ಕೆ ಬಂದ ಉತ್ತರ ಹೀಗಿದೆ –

*ಇವರಿಗೆ,*
*ನರೇಂದ್ರ ಮೋದಿ,*
*ಭಾವಿ ಪ್ರಧಾನಿ,*
*ಕೇರಾಫ್ ಕೃತಕ ಕೆಂಪು ಕೋಟೆ*
*ಅಂಬಿಕಾಪುರ*

ಪ್ರಧಾನಿ ಪದವಿಯೇ ಪರಮೋಚ್ಚ ಎಂದು ಭಾವಿಸಿಕೊಂಡಿರುವ ಮೋದಿ ಅವರಿಗೆ ಗುಜರಾತ್‌ನ ಮುಖ್ಯಮಂತ್ರಿ ನರೇಂದ್ರ ಮೋದಿ ಮಾಡುವ ನಮಸ್ಕಾರಗಳು. ನಿಮ್ಮ ಪತ್ರ ಸಿಕ್ಕಿತು. ಅದಕ್ಕೆ ನನ್ನ ಚುಟುಕು ಉತ್ತರ ಇಲ್ಲಿದೆ.

ನಿಮ್ಮ ಪ್ರಧಾನಿ ಪದವಿಯ ಕನಸಿಗೆ ತೊಡರುಗಾಲಾಗುತ್ತಿದ್ದೇನೆ ಎನ್ನುವ ನಿಮ್ಮ ಅಭಿಪ್ರಾಯ ಕೇಳಿ ನಿಜಕ್ಕೂ ನನಗೆ ಶಾಕ್ ಆಯಿತು. ಕೆಂಪುಕೋಟೆ ಮೇಲೆ ತಿರಂಗ ಹಾರಿಸುವ ನಿಮ್ಮ ಕನಸನ್ನು ಭಂಗ ತರುವ ಉದ್ದೇಶ ನನ್ನದ್ದಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸುತ್ತೇನೆ.

ಆದರೆ, ಒಂದು ಮಾತನ್ನು ನೀವು ನೆನಪಿಟ್ಟುಕೊಳ್ಳಿ: ಮರದಲ್ಲಿರುವ ಎರಡು ಹಣ್ಣಿಗಿಂತ ಕೈಯಲ್ಲಿರುವ ಒಂದು ಹಣ್ಣು ಶ್ರೇಯಸ್ಕರ ಎಂದು ನಮ್ಮ ಆರೆಸ್ಸೆಸ್ ಮುಖಂಡರು ನನಗೆ ಹೇಳಿಕೊಟ್ಟಿದ್ದಾರೆ. ಹೀಗಾಗಿ, ನಾಳೆ ನೀವು ಪ್ರಧಾನಿಯಾಗುತ್ತೀರೋ ಇಲ್ಲವೋ ಗೊತ್ತಿಲ್ಲ. ನಿಮ್ಮನ್ನು ಪ್ರಧಾನಿ ಅಭ್ಯರ್ಥಿ ಎಂದು ಬಿಂಬಿಸಲು ಹಲವರು ಅಡ್ಡಿಪಡಿಸುತ್ತಿರುವುದನ್ನು ಗಮನಿಸಿದರೆ, ನನ್ನೊಳಗೂ ಕೊಂಚ ಭಯ ಶುರುವಾಗಿದೆ. ಇರುವ ಕುರ್ಚಿಯನ್ನು ಬಿಟ್ಟುಕೊಡಬಾರದು ಎನ್ನುವುದಷ್ಟೇ ನನ್ನ ಉದ್ದೇಶ.

ಇದರ ಜತೆಗೆ, ಇನ್ನೊಂದು ಖಾಸಗಿ ವಿಚಾರವನ್ನು ನಿಮ್ಮೊಡನೆ ಹಂಚಿಕೊಳ್ಳುವೆ. ಒಂದು ವೇಳೆ ನಾಳೆ ನೀವು ಪ್ರಧಾನಿಯಾಗಿ ಆಯ್ಕೆಯಾದಿರಿ ಎಂದಿಟ್ಟುಕೊಳ್ಳಿ. ಅದೆಷ್ಟು ದಿನ ಪ್ರಧಾನಿಯಾಗಿ ಇರುತ್ತೀರಿ ಎನ್ನುವ ಪ್ರಶ್ನೆಯೂ ಉದ್ಭವವಾಗುತ್ತದೆ. ರಾಜಕೀಯ ಸಂದಿಗ್ಧತೆ ಸದಾ ಇರುತ್ತದೆ. ಅದರಲ್ಲೂ ಮಿತ್ರಪಕ್ಷಗಳ ಸಹಕಾರದೊಂದಿಗೆ ಅಧಿಕಾರ ಮಾಡುವುದು

ಎಂದರೆ ಹಗ್ಗದ ಮೇಲೆ ನಡೆದ ಹಾಗೆಯೇ. ಹೀಗಾಗಿ, ಒಂದು ವೇಳೆ ಪ್ರಧಾನಿಯಾದರೂ ಗುಜರಾತ್‌ನ ಮುಖ್ಯಮಂತ್ರಿ ಪದವಿಯನ್ನು ಬಿಟ್ಟುಕೊಡುವುದು ಬೇಡ ಎನ್ನುವುದು ನನ್ನ ಬಯಕೆ. ನನ್ನ ಪ್ರಕಾರ ಇದುವೇ ಶಾಶ್ವತ.

ಅಂದು ಕರ್ನಾಟಕದ ಎಚ್.ಡಿ. ದೇವೇಗೌಡರು ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಬಿಸುಟು ಪ್ರಧಾನಿಯಾದರು. ಆದರೆ, ಅದೆಷ್ಟು ದಿನ ಪ್ರಧಾನಿಯಾಗಿ ಉಳಿದರು? ಅತ್ತ ಸಿಎಂ ಪೋಸ್ಟೂ ಇಲ್ಲ; ಪಿಎಂ ಪೋಸ್ಟೂ ಇಲ್ಲ. ಅವರಿಗಾದರೂ ಧಂಡಿ ಮಕ್ಕಳಿದ್ದಾರೆ; ಸೊಸೆಯಂದಿರಿದ್ದಾರೆ; ಮೊಮ್ಮಕ್ಕಳಿದ್ದಾರೆ. ಒಬ್ಬರನ್ನು ಸಿಎಂ ಮಾಡಿದ್ದಾರೆ; ಮುಂದೆ ಇನ್ನಾರನ್ನಾದರೂ ಸಿಎಂ ಮಾಡಬಹುದು. ಆದರೆ, ನಿಮಗೆ ಯಾರೂ ಇಲ್ಲ ಎನ್ನುವುದನ್ನು ಮರೆಯಬೇಡಿ. ನನಗೆ ನೀವು – ನಿಮಗೆ ನಾನು ಅಷ್ಟೇ.


ನಿಮ್ಮ ಪರಮಾಪ್ತ

ನರೇಂದ್ರ ಮೋದಿ,

ಮುಖ್ಯಮಂತ್ರಿ, ಗುಜರಾತ್

---

## ಶಮಿಯ ಅರ್ಥ



ದಸರೆಯ ದಿನದಂದು ಪಠಿಸುವ ಮಂತ್ರದಲ್ಲಿ ಶಮಿಯ ಮಹತ್ವವನ್ನು ತಿಳಿಸಲಾಗಿದೆ.

ಶಮಿ ಶಮಯತೆ ಪಾಪಂ, ಶಮಿ ಲೋಹಿತ ಕಂಟಕಾ
ಧಾರಿಣ್ಯಾರ್ಜುನ ಬಾಣಾನಾಂ ರಾಮಸ್ಯ ಪ್ರಿಯವಾದಿನಿ
ಕರಿಷ್ಯಮಾನಯಾತ್ರಾಯಾಂ ಯಥಾಕಾಲ ಸುಖಂ ಮಯಾ
ತತ್ರ ನಿರ್ವಿಘ್ನಂ ಕರ್ತ್ರಿತ್ವಂ ಶ್ರೀ ರಾಮ ಪೂಜಿತೆ

ಶಮಿ ಪಾಪವನ್ನು ಹೋಗಲಾಡಿಸುತ್ತದೆ. ಶಮಿಯ ಮುಳ್ಳುಗಳು ಕಂದು ಬಣ್ಣವನ್ನು ಹೊಂದಿರುತ್ತವೆ. ಶಮಿ ರಾಮನಿಗೆ ಪ್ರಿಯವಾದದ್ದು. ಅರ್ಜುನನ ಬಾಣದ ತೀವ್ರತೆ ಅದಕ್ಕಿದೆ. ಹೇ ಶಮಿ, ರಾಮ ನಿನ್ನ ಪೂಜೆಯನ್ನು ಮಾಡಿದ್ದಾನೆ. ನಾನು ಯೋಗ್ಯವೇಳೆಯಲ್ಲಿ ಸೀಮೋಲ್ಲಂಘನೆಗೆ ಹೊರಡಲಿದ್ದೇನೆ. ಈ ಯಾತ್ರೆಯನ್ನು ನಿರ್ವಿಘ್ನವಾಗಿಸಿ, ಸುಖಕರವಾಗುವಂತೆ ಮಾಡು ಎಂಬುದು ಈ ಶ್ಲೋಕದ ಅರ್ಥ. ಇದನ್ನು ಮಹಾರಾಜರು ಪಠಿಸುತ್ತಿದ್ದರು.

# ಹಿಂದೀ ಚೀನಿ ಪರಾರಿ!

**- ಇ.ಆರ್. ರಾಮಚಂದ್ರನ್**

**ಈ**ಗೀಗ ದಿನ ಬೆಳಗಾದರೆ ಟಿವೀಲಿ, ಪೇಪರ್ನಲ್ಲಿ ಬರೀ ಚೀನಾದ ಸುದ್ದಿನೇ. ನಮ್ಮ ರೈಲುಗಳು ಇನ್ನೂ ಕುಂಟುತ್ತಾ ಘಂಟೆಗೆ 70 ಕಿ.ಮೀ. ಓಡಿದರೆ ಚೀನಾದಲ್ಲಿ 200 ಕಿ.ಮೀ.ನಲ್ಲಿ ಹಾರುತ್ತೆ. ಇಷ್ಟು ಸ್ಪೀಡಿನಲ್ಲಿ ಓಡುವ ರೈಲುಗಳು ಇಂಡಿಯಾ ಒಳಗೆ ನುಗ್ಗಿ ಬಂದರೂ ಆಶ್ಚರ್ಯವೇನಿಲ್ಲ! ನಮ್ಮ ರಸ್ತೆಯಲ್ಲಿನ ಹಳ್ಳಗಳು ಮಳೆಗಾಲದಲ್ಲಿ ಕೊಳಗಳಾದರೆ, ಚೈನಾದಲ್ಲಿ ರಸ್ತೆಗಳು ನುಣುಪಾಗಿ ನಿಜವಾಗಿಯೂ ಹೇಮಮಾಲಿನಿಯ ಕೆನ್ನೆಯ ಹಾಗಿದೆ! ನಮ್ಮ ಹತ್ತಿರ ಐ.ಎನ್.ಎಸ್. ಏರ್‌ಕ್ರಾಫ್ಟ್ ಕ್ಯಾರಿಯರ್ ವಿಕ್ರಾಂತ್ ಬಂತೂ ಅಂತ ಸಂತೋಷ ಪಡುವಷ್ಟರಲ್ಲಿ ಚೈನಾದ ಹತ್ತಿರ ವಿಕ್ರಾಂತ್ ತರಹ ಹಡಗುಗಳು ಲೆಕ್ಕವಿಲ್ಲದಷ್ಟು ಸಮುದ್ರದಲ್ಲಿ ಬಿದ್ದಿದೆ ಎಂದು ಬಿಬಿಸಿ ಸಾರಿತು.

**ಯಾವ ಸೈನ್ಯವೂ ಮಾಡದಿದ್ದ ಕಾರ್ಯ ನಮ್ಮ ಸುಬ್ಬಮ್ಮ ಮಾಡಿದ್ದರು**

ಊಟ ಮಾಡಿ ಟಿವಿಯ ಮುಂದೆ ನ್ಯೂಸ್ ನೋಡುತ್ತಿರುವಾಗಲೇ ಹಾಗೇ ಜೋಂಪು....

★★★

ನಮ್ಮ ಅಪಾರ್ಟಮೆಂಟಿನಲ್ಲಿ ವಿಚಿತ್ರ ಭಾಷೆ ಕೇಳಿಸುತ್ತಿದೆ. ಅಪಾರ್ಟಮೆಂಟಿನ ಆವರಣದಲ್ಲಿ ಹಾಕಿದ ಮನೆ ಮಾಲೀಕರ ಮನೆ ಹೆಸರುಗಳು ಇನ್ನೂ ವಿಚಿತ್ರ. ಹ್ಯೂ, ಲಿಯ್, ಛೂ ಛೂ ಇತ್ಯಾದಿ. ಅವರ ಮನೆಯಿಂದ ಬರುವ ಅಡುಗೆ ವಾಸನೆ ನಮ್ಮ ಮೂಗಿಗೆ ಅಭ್ಯಾಸವೇ ಇಲ್ಲ!

ಆವರಣದಲ್ಲಿ ದೊಡ್ಡ ನಾಲ್ಕು ಮಹಡಿ ಎತ್ತರದ ಫೌಂಟನ್. ಅದರಲ್ಲಿ ಮೀನು, ಕಪ್ಪೆ ಮೊಸಳೆಗಳು ಈಜಾಡುತ್ತಿದೆ. ಒಂದು ತಿಮಿಂಗಲವನ್ನು ಒಂದೈದಾರು ಚೀನಿಗಳು ಅದರ ಹೊಟ್ಟೆಯ ಮೇಲೆ ಮಲಗಿ ಕೇಕೆ ಹಾಕುತ್ತಾ ಕತ್ತರಿಸುತ್ತಿದ್ದಾರೆ.

ಅಷ್ಟರಲ್ಲಿ ಗೆಳೆಯ ಶ್ರೀನಿವಾಸನ್ ಚೀಲದ ಜೊತೆ ನನ್ನ ಕಡೆ ಬರುವುದು ಕಾಣಿಸಿತು.

ನಮ್ಮಿಬ್ಬರ ಹೆಂಡತಿಯರನ್ನು ಟಿವಿ ಸೀರಿಯಲ್‌ನಿಂದ ಹೊರಗೆ ನೋಡುತ್ತಿರುವುದು ಇದೇ ಮೊದಲ ಬಾರಿ. ಇಬ್ಬರೂ ಕಲರ್ ಛತ್ರಿ ಹಿಡಿದು ಚೈನೀಸ್ ಭಾಷೆಯಲ್ಲಿ ನಗುತ್ತಾ ಜಿಮ್‌ಗೆ ಹೋಗುತ್ತಿದ್ದರು.

ಹುಡುಗರೆಲ್ಲಾ ಬೆಳಗಿನ ಜಾವವೇ ಸ್ಕೂಲಿಗೆ ಹೋದರು. ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಅವರಿಗೆ ಹೇಳಿಕೊಡುತ್ತಿದ್ದದ್ದು ಬ್ಯಾಡ್ಮಿಂಟನ್, ಜಿಮ್ನಾಸ್ಟಿಕ್ಸ್ ಮತ್ತು ಟೇಬಲ್ ಟೆನ್ನಿಸ್.

ನಾವಿಬ್ಬರೂ ಮಾರ್ಕೆಟ್‌ಗೆ ಹೊರಟೆವು. ನಮ್ಮ ಮನೆಯ ಪಕ್ಕದಲ್ಲಿದ್ದ 'ಟೆಂಪಲ್ ಸ್ಟ್ರೀಟ್' ಮಾಯವಾಗಿ 'ಗ್ರೇಟ್ ವಾಲ್ ಸ್ಟ್ರೀಟ್' ಆಗಿತ್ತು. 'ಗ್ರೇಟ್ ವಾಲ್' ಎಂದು ಪ್ರಸಿದ್ಧಿಯಾದ

ರಾಹುಲ್ ಡ್ರಾವಿಡ್ ಕೂಡ ಚೀಲಹಿಡಿದು ಹೋಗುತ್ತಿದ್ದ. ಆ ರಸ್ತೆಯಲ್ಲಿದ್ದ ತರಕಾರಿ ಅಂಗಡಿಗಳು ಮೊದಲಿನ ಹಾಗೇ ಇದ್ದವು. ಈರಪ್ಪ, ಸೀನ ನಗುತ್ತ ಅವರವರ ಅಂಗಡಿಹತ್ತಿರ ನಿಂತಿದ್ದರು. ಈರಪ್ಪ ಸೊಪ್ಪಿನ ಬದಲು ಹಾವುರಾಣಿ, ಓತಿಕೇತ ರಾಶಿ ರಾಶಿ ಗುಡ್ಡೆ ಹಾಕಿಕೊಂಡಿದ್ದ. ನಮ್ಮಿಬ್ಬರ ಚೀಲಕ್ಕೆ ಒಂದಿಷ್ಟು ಸುರಿದು, ನಮ್ಮ ದುಡ್ಡಿಸ್ಕೊಂಡು ಚಿಲ್ಲರೆ ಕೊಟ್ಟ. ಸೀನ ಒಂದು ದೊಡ್ಡ ಪಾತ್ರೆಯಿಂದ ಒಂದೆರೆಡು ಬೊಗಸೆ ಚೇಳು, ಎರಡು ಮೂರು ಪಾವಿನಿಂದ ಅಳೆದು ಜಿರಳೆಗಳನ್ನು ಚೀಲಕ್ಕೆ ಸುರಿದ ಸುರಿದ. ಕೊಸರಿಗೆ ಅಲ್ಲೇ ತಿನ್ನಲು ಕೈಗೆ ಕೊಡಲು ಬಂದ, ಚೀಲಕ್ಕೆ ಹಾಕಲು ಹೇಳಿದೆವು.

ನಮ್ಮ ಒಂಟಿಕೊಪ್ಪಲಿನಲ್ಲಿ ವೆಂಕಟರಮಣಸ್ವಾಮಿ ಮತ್ತು ಈಶ್ವರನ ದೇವಸ್ಥಾನವಿರಲಿಲ್ಲ. ಅವೆಲ್ಲಾ ಎತ್ತರವಾದ ಫ್ಯಾಕ್ಟರಿಗಳಾಗಿದ್ದವು. ಎಲ್ಲೆಲ್ಲೂ ಜನ, ಸೈಕಲ್ಮೇಲೆ, ರಿಕ್ಷಾ, ಬಸ್ ಮತ್ತು ರಸ್ತೆ ತುಂಬಾ ಜನ, ಜನ ಎಲ್ಲೆಲ್ಲೂ.

ನಾನು, ಶ್ರೀನಿವಾಸನ್ ನಮಗೆ ಎಂಥ ಗತಿ ಬಂತೂಂತ ಮಾತನಾಡಿಕೊಂಡೇ ಹೋದ್ವಿ. ನಮಗೆ ಪರಿಚಯವಾದ ಶುಭಂ ಟಿವಿ ಷೋರೂಮ್ನಲ್ಲಿ ಟಿವಿಬ್ರಾಂಡ್‌ಗಳೆಲ್ಲಾ ಬೇರೇನೇ ಇದ್ದವು. ಗೋಡೆಗೆ ಸೀರೆ ಒಣಗಿಹಾಕಿದ ಹಾಗೆ ಟಿವಿ ಸ್ಕ್ರೀನ್‌ಗಳು. ಅದರಲ್ಲಿ ಚೀನಿಯರು ಮಾರ್ಚ್ ಫಾಸ್ಟ್ ಮಾಡುತ್ತಿದ್ದರು. ಇನ್ನೊಂದು ಸೆಟ್‌ನಲ್ಲಿ ಯಾರೋ ಚೀನಿ ಭಾಷಣ ಬಿಗಿಯುತ್ತಿದ್ದ. ಅವನ ಹಿಂದೆ ಎಲ್ಲೋ ನೋಡಿದ ಮುಖಗಳು. ಹಾಂ.. ಜ್ಞಾಪಕ ಬಂತು. ನಮ್ಮ ಪ್ರಧಾನಿ ಮನಮೋಹನ್ ಸಿಂಗ್, ಸೋನಿಯಾ ಗಾಂಧಿ ಮತ್ತು ನರೇಂದ್ರ ಮೋದಿ. ಎಲ್ಲರೂ ಚೀಲ ಹಿಡಿದುಕೊಂಡು ಅವರವರ ಕೆಲಸಕ್ಕೆ ಹೋಗುತ್ತಿದ್ದರು.

ಇವರೆಲ್ಲಾ ಕಿತ್ತಾಡದೆ ದೇಶವನ್ನು ಕಾಪಾಡಿದ್ದರೆ ಈ ಸ್ಥಿತಿ ಬರ್ತಿತ್ತಾ ಎಂದೆ. ಹುಷಾರು ಯಾರಿಗಾದರೂ ಕೇಳಿಸಿದರೆ ನಮ್ಮನ್ನು ಇಲ್ಲೇ ಜಿರಳೆಗಳ ಹಾಗೆ ಕಾಲಿನಲ್ಲಿ ತುಳಿದು ದಿಢೀರ್ ಮೋಕ್ಷ ಕೊಡ್ತಾರೆ ಎಂದರು ಶ್ರೀನಿವಾಸನ್.

ಹಾಗೇ ಮುಂದೆ ಹೋದಾಗ ನಮ್ಮಜ್ಜಿ ಫ್ರೆಂಡ್ ಸುಬ್ಬಮ್ಮನ ಅಂಗಡಿ. ಸುಬ್ಬಮ್ಮ ಯಾರ ಹತ್ತಿರಾನೋ ಚೈನೀಸ್ನಲ್ಲಿ ಹರಟೆ ಹೊಡೀತಿದ್ರು. ಕನ್ನಡದಿಂದ ಚೀನೀ ಭಾಷೆ! ಆದರೆ ಮಾರುತ್ತಿದ್ದ ಸಾಮಾನೆಲ್ಲ ಮೊದಲಿನ ತರಹಾನೆ. ಕೋಡುಬಳೆ, ಮುರುಕು, ಮುಚ್ಚೋರೆ, ಕರಿಗಡುಬು, ರವಾ ಲಾಡು, ಪುಳ್ಳಂಗಾಯಿ ಉಂಡೆ ಇತ್ಯಾದಿ. ಹೊರಗಡೆ ಮೆಣಸಿನಕಾಯಿ ಪುಡಿಯ ಮೂಟೆ.

ನಮ್ಮನ್ನು ನೋಡಿದ ತಕ್ಷಣವೇ ಸುಬ್ಬಮ್ಮನವರು ಚೈನೀಸಿನಲ್ಲಿ ನಕ್ಕು, ಹರುಕು ಮುರುಕು ಕನ್ನಡ ಶುರು ಮಾಡಿದರು. ಈ ಸರ್ತಿ ಪುಡಿಗೆ ಬಹಳ ಮೆಣಸಿನ ಕಾಯಿ ಬಿದ್ದು ಹೋಯಿತು. ವಿಪರೀತ ಖಾರ. ಮುಂದಿನ ಸರ್ತಿ ಒಳ್ಳೇ ಪುಡಿ ಕೊಡ್ತೀನಿ. ನಮಗೆ ಏನು ತೋಚಿತೋ ಪರವಾಗಿಲ್ಲ. ಎರಡು ಬದಲು ನಾಲ್ಕು ಪ್ಯಾಕೆಟ್ ಕೊಡೀಂತ ತೊಗೊಂಡ್ಬಂದ್ವಿ. ನಮ್ಮ ಚೀಲಕ್ಕೆ ಒಂದಿಷ್ಟು ಪುಳ್ಳಂಗಾಯಿ ಉಂಡೇನೂ ಹಾಕಿದರು ಸುಬ್ಬಮ್ಮ.

ಚೀಲವನ್ನು ಧಣಿಗಳಿಗೆ ಕೊಟ್ಟು ಮೊಸಳೆಗಳನ್ನು ನೋಡ್ತಾ ಕೂತಿದ್ವಿ.

ಮಧ್ಯಾಹ್ನ ಊಟವಾದ ಮೇಲೆ ಅಪಾರ್ಟಮೆಂಟಿನಲ್ಲಿ ಇದ್ದಕ್ಕಿದ್ದಂತೆ ಕೋಲಾಹಲ, ಕೂಗಾಟ, ಸಾಮೂಹಿಕ ಗೋಳು, ಅಳು ಅರ್ಥವೇ ಆಗ್ತಿಲ್ಲ.

ಒಬ್ಬೊಬ್ಬರಾಗಿ ಸಾಮಾನು ಹಿಡಿದುಕೊಂಡು ಕೆಳಗೆ ಬರುತ್ತಿದ್ದಾರೆ. ಹೊರಗಡೆ ದೊಡ್ಡ ಲಾರಿಗಳು ನಿಂತಿವೆ. ಮನೆಯಲ್ಲಿದ್ದವರು ಸಾಮಾನುಗಳೆಲ್ಲಾ ಹೇರಿದರು. ಮಧ್ಯೆ ಮಧ್ಯೆ ಡಾಕ್ಟರ್ ಅವರಿಗೆ ಗ್ಲೂಕೋಸ್ ಕುಡಿಸುತ್ತಿದ್ರು. ಒಬ್ಬ ಡೆಂಟಿಸ್ಟ್ ರಕ್ತ ನಿಲ್ಲಿಸುವುದಕ್ಕೆ ಒಂದಿಷ್ಟು ಜನಕ್ಕೆ ಅವರ ದವಡೆಗೆ ಏನೋ ಹಚ್ತಿದ್ದ. ಎಲ್ಲರೂ ಲಾರಿಯ ಹಿಂದೆ ಅವರವರ ಕಾರುಗಳಲ್ಲಿ ಸಾಮೂಹಿಕ ಪರಾರಿ.

ಎಲ್ಲವೂ ಮೌನ. ಸ್ಮಶಾನ ಮೌನ.

ಏನಾಯಿತೂಂತ ಆಮೇಲೆ ಗೊತ್ತಾಯ್ತು. ಆದದ್ದಿಷ್ಟೆ. ಚೇಳು, ಜಿರಳೆಗಳಿಗೆ ಧಾರಾಳವಾಗಿ ಸುಬ್ಬಮ್ಮನ ಸ್ಪೆಷಲ್ ಮೆಣಸಿನ ಕಾಯಿ ಪುಡಿ ಹಾಕಿ ಅಡುಗೆ ಮಾಡಿದ್ರು. ಅದರ ಪ್ರಭಾವ ಇಮೀಡಿಯೆಟ್! ಖಾರ ವಿಪರೀತವಾಗಿ ಒಂದಿಷ್ಟು ಜನ ಬಾತ್ ರೂಮಿಗೆ ಓಡಿದರೆ, ಮಿಕ್ಕವರು ಖಾರ ತಡಿಯಲಾರದೆ ಚೀಲದಿಂದ ಪುಳ್ಳಂಗಾಯಿ ಉಂಡೆ ತೆಗೆದು ಕಚ್ಚಿದಾಗ ಅವರ ಸಾಲು ಹಲ್ಲು ಕೈಗೇ ಬಂತು! ಇದ್ಯಾಕೋ ಸರಿಯಿಲ್ಲಾಂತ ಎಲ್ಲರು ಒಟ್ಟಿಗೆ ಕಂಬಿ ಕಿತ್ತರು ಚೀನಿಯರು.

ಯಾವ ಸೇನೆಯೂ ಮಾಡಲಾಗದ ಕಾರ್ಯ ಸುಬ್ಬಮ್ಮನ ಪುಡಿ ಮತ್ತು ಉಂಡೆ ಮಾಡಿತ್ತು.


★★★

ಮರುದಿನ ಮಾಮೂಲಿನ ಹಾಗೆ ಬೆಳಿಗ್ಗೆ ವೆಂಕಟರಮಣಸ್ವಾಮಿ ದೇವಸ್ಥಾನದಿಂದ ಬೆಳಿಗ್ಗೆ 5.30ಕ್ಕೆ ಎಮ್.ಎಸ್. ಸುಬ್ಬುಲಕ್ಷ್ಮಿಯ ವೆಂಕಟೇಶ ಸುಪ್ರಭಾತ ಕೇಳಿಬಂತು. ಅಪಾರ್ಟಮೆಂಟಿನ ಆವರಣ ಖಾಲಿ.

ಕೆಲಸದವರು ಗುಡಿಸುತ್ತಿದ್ದರು. ವಾಚ್ಮನ್ ಬೆಳಗಿನ ಡ್ಯೂಟಿಗೆ ಬಂದಿದ್ದ. ಎಲ್ಲ ಮಾಮೂಲು.

ಶ್ರೀನಿವಾಸನ್ ಎಂದಿನಂತೆ ದೇವಸ್ಥಾನಕ್ಕೆ ಹೊರಟರು.

## ಪ್ರಥಮ ದಸರೆ



ಮೈಸೂರಿನಲ್ಲಿ ನಡೆದ ಪ್ರಥಮ ದಸರೆ ಸುಮಾರು 211 ವರ್ಷಗಳ ಹಿಂದೆ, ಅಂದರೆ 1799ನೇ ಮೇ 4ರಂದು ನಡೆದ ನಿರ್ಣಾಯಕ ಯುದ್ಧದಲ್ಲಿ ಟಿಪ್ಪೂಸುಲ್ತಾನ ಮಡಿದ ನಂತರ ಒಡೆಯರ ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಪುನಃ ಮೈಸೂರಿಗೆ ವರ್ಗಾಯಿಸಿದ ನಂತರವೇ ದಸರಾ ಉತ್ಸವಗಳು ಪ್ರಾರಂಭವಾದವು.

# ಗೋವಾ ಹಾಲಿಡೇ

**- ಉಷಾ ವಾಸು**

**ಮ**ಧ್ಯಾಹ್ನ ಎರಡೂವರೆ ಘಂಟೆ ಸಮಯ. ಅಪರಂಜಿ ಒಂದು ಆರ್ಟಿಕಲ್ ಓದಿ, ಬೆಚ್ಚಗೆ ಹೊದ್ದುಕೊಂಡು ಮುದುರಿಕೊಂಡು ಮಲಗಿ ಸಕ್ಕರೆ ನಿದ್ದೆ ಮಾಡೋ ಸಮಯ. ಒಂದು ವಾರದಿಂದ ದಿನಾ ಒಂದು ಫೋನು. ನಿಮ್ಮ ಸಹಾಯ ಬೇಕಾದ್ರೆ ನಾನೇ ಫೋನ್ ಮಾಡ್ತೀನಿ ಅಂತ ಹೇಳಿದ್ರೂ ಬಿಡುವಲ್ರು! ಹೋಗ್ಲಿ, ಫೋನು ಎತ್ತಿಟ್ಟುಬಿಟ್ಟು ಮಲಕ್ಕೊಳ್ಳೋಣ ಅಂದ್ರೆ ಹಾಳಾದ್ದು ಆ್ಯಂಕ್ಸೈಟಿ ಡಿಸಾರ್ಡ್ರು. 'ದಿ ಕಾಲ್ ಯು ಮಿಸ್ಡ್ ವಾಸ್ ದಿ ಮೋಸ್ಟ್ ಇಂಪಾರ್ಟೆಂಟ್ ಕಾಲ್' ಅಂತ! ಇದಕ್ಕೇನಾದ್ರೂ ಉಪಾಯ ಹುಡುಕ್ಬೇಕು ಅಂತ ಹೀಗೆ ಮಾಡಿದೆ ನೋಡಿ! ಇಟ್ ವರ್ಕ್ಡ್!

'ಹಲೋ ಮ್ಯಾಡಮ್, ನಿಮಗೆ ಕಂಗ್ರಾಜುಲೇಷನ್ಸ್, ನಿಮ್ಮ ನಂಬರ್ ನಮ್ಮ ಲಕ್ಕಿ ಡ್ರಾನಲ್ಲಿ ಸೆಲೆಕ್ಟ್ ಆಗಿದೆ!'

> ನಮ್ಮ ಆಫರನ್ನ
> ಅವರು ಒಪ್ಪಲೇ
> ಇಲ್ಲ ಯಾಕೆ?

'ಏನಮ್ಮಾ ಅದು?'

'ಗೋವಾ ಹಾಲಿಡೇಗೆ ನೀವು ಸೆಲೆಕ್ಟ್ ಆಗಿದ್ದೀರಿ!'

'ಓ! ಹೌದಾ, ನಾನೇನು ಮಾಡ್ಬೇಕು?'

'ನೋಡಿ ಮೇಡಂ, ನಾರ್ಮಲ್ಲಾಗಿ ನಾವು ದಿನಕ್ಕೆ ಹತ್ತು ಸಾವಿರ ರೂಪಾಯಿ ಚಾರ್ಜ್ ಮಾಡ್ತೀವಿ. ನೀವು ಲಕ್ಕಿ ವಿನ್ನರ್ ಆಗಿರೋದ್ರಿಂದ ಮೂರು ಡೇ ನಾಲ್ಕು ನೈಟ್‌ಗೆ ನಿಮಗೆ ಕೇವಲ ದಿನಕ್ಕೆ ಎರಡೂವರೆ ಸಾವಿರ ಚಾರ್ಜ್ ಮಾಡ್ತೀವಿ ಅಷ್ಟೆ. ತುಂಬಾ ಒಳ್ಳೆ ಆಫರ್ರು ಮೇಡಂ, ಮಿಸ್ ಮಾಡ್ಕೋಬೇಡಿ.'

'ಗೋವಾಗೆ ಹೋಗಿ ನಾನು ಏನು ಮಾಡ್ಲಿ?'

'ಗೋವಾ ಈಸ್ ಎ ಪ್ಯಾರಡೈಸ್ ಮೇಡಂ. ಅಲ್ಲಿ ಸಮುದ್ರ ಇದೆ. ತುಂಬಾ ಬೀಚುಗಳು ಇವೆ. ಇಡೀ ದಿನ ನೀವು ಅಲ್ಲಿ ಕಳೀಬಹುದು. ನಮ್ಮ ರೆಸಾರ್ಟ್‌ನಿಂದ ಬೀಚುಗಳು ಒಂದು ಕಿಲೋ ಮೀಟರ್ ದೂರ ಇದೆ ಅಷ್ಟೆ. ನಡ್ಕೊಂಡೇ ಹೋಗ್ಬಹುದು.'

'ದಿನಕ್ಕೆ ಎರಡೂವರೆ ಸಾವಿರ ಚಾರ್ಜ್ ಆದ್ರೆ ನೈಟ್‌ಗೆ ಎಷ್ಟು?'

'ಹಾಗಲ್ಲಾ ಮೇಡಂ ಅದು, ಇಪ್ಪತ್ತನಾಲ್ಕು ಘಂಟೆಗೆ, ಅದ್ರಲ್ಲಿ ಡೇ ಅಂಡ್ ನೈಟ್ ಎರಡೂ ಸೇರತ್ತೆ.'

'ನೋಡಿ, ನಾವು ದಿನಾ ಪೂರ್ತಿ ಬೀಚಲ್ಲಿ ಕಳ್ಯೋದ್ರಿಂದ ರಾತ್ರಿ ಮಲಕ್ಕೊಳಕ್ಕೆ ಮಾತ್ರ ರೆಸಾರ್ಟ್‌ಗೆ ಬರ್ತೀವಿ. ಆದ್ರಿಂದ ನೀವು ಚಾರ್ಜ್‌ನ 1250 ರೂಪಾಯಿ ಮಾಡ್ಕೋಬೇಕು. ಊಟ ತಿಂಡೀಗೆ ಎಷ್ಟು ಚಾರ್ಜ್ ಮಾಡ್ತೀರಿ?'

'ಬ್ರೇಕ್‌ಫಾಸ್ಟು ಚಾರ್ಜ್‌ನಲ್ಲಿ ಸೇರಿದೆ ಮೇಡಂ. ಊಟಕ್ಕೆ ಒಬ್ಬರಿಗೆ 300 ಆಗತ್ತೆ.'

‘ನೋಡಿ, ನಾವು ನಂದೇ ಅಡಿಗೆ ಮಾಡ್ಕೊಳ್ತೀವಿ. ಹೊರ್ಗಡೆ ತಿಂದ್ರೆ ನಮ್ಗೆ ಮೈಗಾಗಲ್ಲ. ಅದಕ್ಕೇ ಎರಡು ಊಟ ಅಂದ್ರೆ 600 ರೂಪಾಯಿ ಕಡಿಮೆ ಆದ್ರೆ ಚಾರ್ಜ್ 650 ಆಗತ್ತೆ. ಬೆಡ್, ರಗ್ಗು, ಬೆಡ್ಷೀಟು ಎಲ್ಲಾ ಇದ್ಯಾ?’

‘ನಂದು ಫೋರ್ ಸ್ಟಾರ್ ರೆಸಾರ್ಟ್ ಮೇಡಂ. ಇಂಪೋರ್ಟೆಡ್ ಬೆಡ್ಡು, ಬೆಡ್ಷೀಟು ಎಲ್ಲಾ ತುಂಬಾ ಕಂಫರ್ಟಬಲ್ಲಾಗಿದೆ.’

‘ನೋಡಿ, ನಮಗೆ ಬೆಡ್ಡು, ಬೆಡ್ಷೀಟು ಎಲ್ಲಾ ಬೇಡ. ಯಾರ್ಯಾರು ಅದರ್ಮೇಲೆ ಮಲಗಿರ್ತಾರೋ ಏನೋ. ಅದನ್ನೆಲ್ಲಾ ತೆಗೆಸ್ಬಿಡಿ. ನಾನು ನಮ್ಮ ಯಜಮಾನ್ರು ಕಾಟ್ ಮೇಲೆ ನಮ್ದೇ ಛಾದರ ಹಾಸ್ಕೊಂಡು ಮಲಕ್ಕೋತೀವಿ. ಸೋ ಇನ್ನೂ ಇನ್ನೂರು ಕಡಿಮೆ ಆಗತ್ತೆ. ಅಂದ್ರೆ ಚಾರ್ಜ್ 450 ಆಗತ್ತೆ. ನಿಮ್ಮಲ್ಲಿ ಲಾಂಡ್ರಿ ಸರ್ವೀಸು ಇದ್ಯಾ?’

‘ಓ, ಖಂಡಿತ ಇದೆ. ನಮ್ದು ಫೋರ್ ಸ್ಟಾರ್ ರೆಸಾರ್ಟ್ ಮೇಡಂ. ಶರ್ಟ್‌ಗೆ 30, ಪ್ಯಾಂಟಿಗೆ 35, ಸೆಲ್ವಾರ್ ಕಮೀಜ್ಗೆ 45, ಸೀರೇಗೆ 50, ಅಂಡರ್ಗಾರ್ಮೆಂಟ್ಸ್‌ಗೆ 35 ರೂಪಾಯಿ ಆಗತ್ತೆ.’

‘ಓ ಹೌದಾ, ನೋಡಿ ನಾವು ಇನ್ನೊಬ್ರ ಅಂಡರ್ಗಾರ್ಮೆಂಟ್ಸ್ ಒಗೆಯಲ್ಲ. ಬೇರೆಯವ್ರದ್ದು ಐದು ಶರ್ಟು, ಐದು ಪ್ಯಾಂಟು, ಎರಡು ಸೆಲ್ವಾರ್ ಕಮೀಜ್, ಒಂದು ಸೀರೆ ನಾವೇ ಒಗೀತೀವಿ. ಅದಕ್ಕೆ ಒಟ್ಟು ಚಾರ್ಜ್ ನಾನ್ನೂರಾ ಅರವತ್ತೈದು ಆಗತ್ತೆ. ಅಂದ್ರೆ ನೀವೇ ನಮಗೆ ಹದಿನೈದು ರೂಪಾಯಿ ದಿನಕ್ಕೆ ಕೊಡಬೇಕಾಗತ್ತೆ. ನಿಮ್ಗೆ ಒಪ್ಗೆ ಆದ್ರೆ ನಾವು ಬರ್ತೀವಿ!’

‘ಅದ್ಹೇಗಾಗತ್ತೆ ಮೇಡಂ. ನಂದು ಫೋರ್ ಸ್ಟಾರ್ ರೆಸಾರ್ಟ್. ನೀವು ಏನೂ ಮಾಡಕ್ಕಾಗಲ್ಲ. ಅದು ರೂಲ್ಸು. ನಾನು ಕೊಟ್ಟಿರೋದು ತುಂಬಾ ಒಳ್ಳೇ ಆಫರ್ರು ಮೇಡಂ. ಯೋಚನೆ ಮಾಡಿ.’

‘ನೋಡಿ, ನಾನು ನಿಮ್ಗೆ ಕೊಟ್ಟಿರೋ ಆಫರ್ರೂ ಕೂಡ ತುಂಬಾ ಯೋಚನೆ ಮಾಡಿ ಕೊಟ್ಟಿರೋ ಒಳ್ಳೇ ಆಫರ್ರೇ! ನೀವೂ ಯೋಚ್ನೆ ಮಾಡಿ ನಿಮ್ಗೆ ಒಪ್ಗೆ ಆದ್ರೆ ಹೇಳಿ. ನಾವು ಗೋವಾಗೆ ಹಾಲಿಡೇಗೆ ಬರ್ತೀವಿ. ಏನಂತೀರಿ?’


ಅವತ್ತು ಪಟಕ್ಕನೆ ಡಿಸ್ಕನೆಕ್ಟ್ ಆದ ಫೋನು ಮತ್ತೆ ಬಂದಿಲ್ಲ. ವಿನಯವಾಗಿ ನಮಗೆ ಇಂಟ್ರೆಸ್ಟ್ ಇಲ್ಲ ಅಂತ ಹೇಳಿದ್ರೆ ಕೇಳಲಿಲ್ಲ. ದಿನಾ ಬೇರೆ ಬೇರೆಯವ್ರು ಫೋನ್ ಮಾಡಿ ತಲೆ ತಿಂತಿದ್ರು. ಈಗ ಯಾವ ತೊಂದ್ರೇನೂ ಇಲ್ದೆ ನನ್ನ ಸಕ್ರೆ ನಿದ್ದೆ ಮಾಡ್ತಿದ್ದೀನಿ!

✵

## ನವರಾತ್ರಿ



30ನೇ ಜೂನ್ 1799 ಭಾನುವಾರ ರೋಹಿಣಿ ನಕ್ಷತ್ರದ ದಿವಿ 15 ಘಳಿಗೆಗೆ ಸಂದ ಕನ್ಯಾ ಲಗ್ನದಲ್ಲಿ ಮೈಸೂರಿನ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ (ಆಗಿನ್ನೂ ಮೈಸೂರಿನಲ್ಲಿ ಅರಮನೆ ಇರಲಿಲ್ಲ) ಕೇವಲ 5 ವರ್ಷದ ಕುವರ ಮುಮ್ಮಡಿ ಕೃಷ್ಣರಾಜ ಒಡೆಯರು ಸಿಂಹಾಸನಾರೋಹಣ ಮಾಡಿದರು. ಅದೇ ವರ್ಷದ ನವರಾತ್ರಿ ಉತ್ಸವವನ್ನು ಪ್ರಪ್ರಥಮ ಬಾರಿಗೆ ಆಚರಿಸಲಾಯಿತು.




ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.

**ಡಾ|| ಜಿ. ಪುರುಷೋತ್ತಮ** ಇಡಿ.ಡಿ.
**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

# ಬಾವಿಗೆ ಬಿದ್ನಂತಪ್ಪೋ

**- ಎಚ್. ಶಾಂತರಾಜ ಐತಾಳ**

**ದಾ**ವಣಗೆರೆಯಲ್ಲಿ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾಗ ಹಾಸ್ಟೆಲ್‌ವಾಸ. ಮಂಗಳೂರಿನವರೇ ಆದ ಜೋಸೆಫ್ ಡಿಸೋಜ ನನ್ನ ಹಾಸ್ಟೆಲ್‌ಮೇಟ್ ಆಗಿದ್ದ. ಅವತ್ತೊಂದು ಸಂಜೆ ಹೊತ್ತು ಗೆಳೆಯರೆಲ್ಲ ವಾಕಿಂಗ್ ಮುಗಿಸಿ. ಹಾಸ್ಟೆಲ್‌ನ ಡೈನಿಂಗ್ ಹಾಲ್‌ನಲ್ಲಿ ಪೋಲಿ ಜೋಕ್ ಹೇಳುತ್ತಾ, ಡಿನ್ನರ್‌ನ ನಿರೀಕ್ಷೆಯಲ್ಲಿದ್ದಾಗ ಅಂಚೆ ಅಣ್ಣ ಎಲ್ಲಿಂದಲೋ ಪ್ರತ್ಯಕ್ಷವಾಗಿ ಬಿಟ್ಟ –

'ಟೆಲಿಗ್ರಾಂ – ಜೋಸೆಫ್ ಯಾರ್ರೀ?' – ಅಂತ ಆತ ಕೇಳಿದಾಗ ನಮಗೆಲ್ಲ ಎದೆಯೊಳಗೆ ಅವಲಕ್ಕಿ ಕುಟ್ಟಿದ ಅನುಭವ. ಕೇಕೆ – ನಗು ಎಲ್ಲ ಬಂದ್! ಜೋಸೆಫ್ ಹೋಗಿ ಟೆಲಿಗ್ರಾಂ ಪಡಕೊಂಡು ಒಡೆದು ಓದಿದ್ದೂ ಆಯಿತು.

> **ಟೆಲಿಗ್ರಾಂನಲ್ಲಿ ಸ್ವಲ್ಪ ಎಡವಟ್ಟಾದರೂ ಅದೆಷ್ಟು ಅನಾಹುತಗಳಾಗುತ್ತಿದ್ದವು!**

'ಏನಮ್ಮಾ ಎಲ್ಲ ಓ.ಕೆ. ತಾನೆ?' ಎಂದು ಒಕ್ಕೊರಲಿನಿಂದ ಕೇಳಿದಾಗ ಜೋಸೆಫ್‌ನ ಬಾಯಿಯ ಪಸೆ ಆರಿಯಾಗಿತ್ತು. ತನ್ನ ಕೈಲಿದ್ದ ತಂತಿ ಸಂದೇಶವನ್ನು ನನಗೆ ಹಸ್ತಾಂತರಿಸಿ, ಮುಖ ಮುಚ್ಚಿಕೊಂಡು ಬಿಟ್ಟ ಜೋಸೆಫ್. ಅದನ್ನು ಓದಿದ ನನಗೂ ಮೈ ಬೆವರಿತು – 'ಮದರ್ ಸೀರಿಯಸ್ ಸ್ಟಾರ್ಟ್ ಇಮಿಡಿಯಟ್ಲಿ – ಜೂಲಿಯಾನ' ಎಂಬ ಪಂಚ ಶಬ್ದಗಳನ್ನೊಳಗೊಂಡಿತ್ತು ಆ ಟೆಲಿಗ್ರಾಂ. ತಾಯಿಗೆ ಸಖತ್ ಕಾಯಿಲೆ ಎಂದು ಚಿಕ್ಕ ತಾಯಿಯಾದ ಜೂಲಿಯಾನರೇ ಸಂದೇಶ ಕಳಿಸಿದ್ದಾರೆ ಎಂದಾದ ಮೇಲೆ ಪರಿಸ್ಥಿತಿ ಹೇಗಿರಬಹುದು ಎಂದು ಎಲ್ಲರೂ ಗುಸುಗುಸು – ಅಂತ ಚರ್ಚಿಸಿದೆವು.

ತಕ್ಷಣ ಹೊರಡಲೇ ಬೇಕಾದ ಅನಿವಾರ್ಯತೆ. ಮೊಬೈಲ್ ಫೋನಾಗಲಿ, ರಾತ್ರಿ ಬಸ್ಸಾಗಲಿ ಆಗ ಎಲ್ಲಿಂದ? ರೈಲ್ವೆ ಸ್ಟೇಷನ್ ಬದಿಯಿಂದ ಒಂದು ಟ್ಯಾಕ್ಸಿ ಮಾಡಿಕೊಂಡು ಡಿನ್ನರ್‌ಗೂ ಕಾಯದೆ ಮಂಗಳೂರಿಗೆ ರಾತ್ರಿಯೇ ಹೊರಡುವುದೆಂದಾಯಿತು. ಮಿತ್ರ ಜೋಸೆಫ್ ಜತೆ ನಾನೂ ಹೊರಟೆ. ದಾರಿಯುದ್ದಕ್ಕೂ ಜೋಸೆಫ್ ಸಣ್ಣಗೆ ಬಿಕ್ಕಳಿಸುತ್ತಲೇ ಇದ್ದ.

ಮರುದಿನ ಬೆಳಿಗ್ಗೆ ಕಂಕನಾಡಿ ಸಮೀಪದ ಮನೆಯ ಎದುರು ಟ್ಯಾಕ್ಸಿ ನಿಲ್ಲಿಸಿ ನಾವು ಇಳಿಯುತ್ತಿರುವಾಗಲೇ ಇಬ್ಬರು ಮಹಿಳೆಯರು ಓಡೋಡಿ ಗೇಟ್ ಹತ್ತಿರ ಬರುತ್ತಿರುವುದನ್ನು ಕಂಡೆ. ಜೋಸೆಫ್‌ನ ಮುಖದಲ್ಲಂತೂ ಅಚ್ಚರಿ!

'ಅರೆ ಮಮ್ಮಿ ಆರ್ ಯು ಓ.ಕೆ.?' ಎಂದು ಉದ್ಗರಿಸಿದನಾತ.

'ಐ ಆಮ್ ಫೈನ್ ಪುತ್ತಾ' ಅಂದರು ತಾಯಿ.

'ಮತ್ತೆ ಈ ಟೆಲಿಗ್ರಾಂ?' ಜೋಸೆಫ್ ಮತ್ತಷ್ಟು ವಿಸ್ಮಯದಿಂದ ಪ್ರಶ್ನಿಸಿದ.

'ಅದು ನಾನು ಕಳಿಸಿದ್ದು' ಅಂದರು ಇನ್ನೋರ್ವ ಮಹಿಳೆ – ಅಂದರೆ ಚಿಕ್ಕಮ್ಮ ಜೂಲಿಯಾನಾ.

'ನಮ್ಮ ತಾಯಿ ನಿನ್ನೆಯಿಂದ ಬೇಹೋಶ್ ಆಗಿದ್ದಾರೆ ಮಗೂ – ಡಾಕ್ಟರೆಲ್ಲ ನೋಡಿ ಹೋಗಿ ಕೈ ಚೆಲ್ಲಿದ್ದಾರೆ – ಆಸ್ಪತ್ರೆ ಚಿಕಿತ್ಸೆಯೂ ಪ್ರಯೋಜನ ಇಲ್ವಂತೆ – ಅಂತೂ ತೊಂಬತ್ತನೇ ಬರ್ತ್‌ಡೇ ಆಚರಿಸಿದ ಹದಿನೈದು ದಿನಕ್ಕೇ ಹೀಗಾಯಿತು ನೋಡು' – ಜೂಲಿಯಾನಾ ಹೇಳ್ತಾನೆ ಇದ್ರು. ತುಂಬು ಜೀವನ ನಡೆಸಿದ ಅಜ್ಜಿಯನ್ನು ನೆನೆದು ಜೋಸೆಫ್‌ನ ಕಣ್ಣು ತೇವವಾಗಿತ್ತಾದರೂ ಸಣ್ಣ ಪ್ರಾಯದ ತನ್ನ ಮಮತೆಯ ತಾಯಿಗೇನೂ ಅಪಾಯವಾಗಿಲ್ಲವಲ್ಲ ಎಂದೆಣಿಸಿ, ದೇವರಿಗೆ ಕೃತಜ್ಞತೆ ಸಲ್ಲಿಸಿದ. ಇದಕ್ಕೆಲ್ಲ ಪ್ರತ್ಯಕ್ಷ ಸಾಕ್ಷಿಯಾಗಿದ್ದ ನನಗೆ ಇದು ಕನಸೋ ನನಸೋ ಎಂದು ನಂಬಲಾಗಲಿಲ್ಲ. ಅಂತೂ ಟೆಲಿಗ್ರಾಂನಲ್ಲಿ ಸ್ವಲ್ಪ ಎಡವಟ್ಟಾದರೂ ಎಷ್ಟೆಲ್ಲ ಅಪಾರ್ಥಗಳು, ಅನರ್ಥಗಳು ಸಂಭವಿಸಿಯಾವು ಎಂಬುದಕ್ಕೊಂದು ನಿದರ್ಶನ ಸಿಕ್ಕಂತಾಯಿತು. ಟೆಲಿಗ್ರಾಂಗಳಿಗೆ ವಿದಾಯ ಹೇಳಿಯಾದ ಮೇಲೂ ಅವುಗಳು ಉಂಟುಮಾಡುತ್ತಿದ್ದ ಸ್ವಾರಸ್ಯಗಳಿಗೆ ಎಣೆಯಿಲ್ಲ.

ಈ ಘಟನೆಯನ್ನೊಮ್ಮೆ ಮೆಲುಕು ಹಾಕುವಾಗ ರಜೆ ಮೇಲೆ ಬಂದಿದ್ದ ನನ್ನಣ್ಣನ ಮಗ ಮಿಲಿಟ್ರಿ ಮೇಜರ್ ಚಂದ್ರಕಾಂತನೂ ಇದ್ದ.

'ಅಯ್ಯೋ! ನಮ್ಮ ಮಿಲಿಟ್ರಿಯಲ್ಲಿ ಬಿಡಿ, ಇಂತಹ ಪ್ರಸಂಗಗಳು ಹಿಂದೆ ಬೇಕಾದಷ್ಟು ನಡೀತಾ ಇದ್ದವು. ರಜಾ ಹಾಕಿ ಊರಿಗೆ ಹೋಗೋದು – ಆ ಮೇಲೆ ಬ್ಯಾರಾಕ್‌ಗೆ ಹಿಂದಿರುಗಬೇಕಾದರೆ, ಏನೆಲ್ಲ ಕಾರಣ ಹೇಳಿ ಟೆಲಿಗ್ರಾಂ ಮೂಲಕ ಮತ್ತೆ ರಜಾ ಮುಂದುವರಿಸಲು ಕೋರಿಕೆ ಒಪ್ಪಿಸೋದು ವೆರಿ ಕಾಮನ್.'

'ಸುಮ್ ಸುಮ್ನೆ ಹೇಳ್‌ಬ್ಯಾಡ ಮಾರಾಯಾ, ಯಾವುದಾದ್ರೂ ಘಟನೆ ನೆನಪಿದ್ರೆ ಹೇಳು, ಸಾಕು.'

'ನೆನಪಿಲ್ದೆ ಏನು? ನಮ್ಮ ಲ್ಯಾನ್ಸ್ ನ್ಯಾಕ್ ಮುರುಗನ್ ಮದ್ರಾಸಿಗೆ ರಜೆ ಮೇಲೆ ಹೋಗಿದ್ದ. ಆತ ಮತ್ತೆ ಡ್ಯೂಟಿಗೆ ಹಾಜರಾಗ ಬೇಕಾದ ದಿನ ಕಳೆದು ಹೋಯಿತು. ಮರುದಿನ ಮುಂಜಾನೆ ಆತ ಕಳಿಸಿದ ಟೆಲಿಗ್ರಾಂ ನಮ್ಮ ಕರ್ನಲ್ ಸಾಹೇಬ್ರಿಗೆ ಸಿಕ್ತು ನೋಡಿ. ಅವ್ರು ಹಾಸ್ಯ ಪ್ರವೃತ್ತಿಯವರಾದ್ದರಿಂದ ಅದನ್ನು ಸೀರಿಯಸ್ ಆಗಿ ತಗೊಳ್ಳಲಿಲ್ಲ ಗೊತ್ತಾ, ಚಿಕ್ಕಪ್ಪ! ಅಂದ.'

'ಅಂತಾದ್ದೇನಿತ್ತು ಆ ಟೆಲಿಗ್ರಾಂನಲ್ಲಿ.'

'ಏನಿಲ್ಲ – ಅವ ಒಂದು ಸ್ಪೆಲಿಂಗ್ ಮಿಸ್ಟೇಕ್ ಮಾಡಿ ಏನೇನೋ ಅರ್ಥ ಬಂತು ನೋಡಿ. ಎರಡು ದಿನ ಬಿಟ್ಟು ಆತ ಬಂದು ಎಲ್ಲ ವಿವರಣೆ ನೀಡಿದ ಮೇಲೆ ವಸ್ತುಸ್ಥಿತಿ ಗೊತ್ತಾಗಿದ್ದು. ಆತ ಕಳಿಸಿದ ಸಂದೇಶ ಹೇಗಿತ್ತು ಗೊತ್ತಾ?'

'ರೈಲಿನಲ್ಲಿ ಒಂದು ಹುಡುಗಿಗೆ ಜನ್ಮ ಕೊಟ್ಟಿದ್ದೇನೆ – ಹಾಗಾಗಿ ನಾಳೆ ಹೊರಟು ಬರುತ್ತೇನೆ' ಅಂತ. ಅದಕ್ಕೆ ನಮ್ಮ ಕರ್ನಲ್ ಸಾಹೇಬರು 'ಶುಭಾಶಯಗಳು – ನಿನ್ನ ಮುಂದಿನ ಹೆರಿಗೆ ಮಿಲಿಟ್ರಿ ಬ್ಯಾರಾಕ್ಸ್‌ನಲ್ಲೇ ಆಗುವಂತಾಗಲಿ' ಎಂದು ಮರು ತಂತಿಯನ್ನೂ ಕಳಿಸಿಯಾಗಿತ್ತು.

ಆಮೇಲೆ ಗೊತ್ತಾಯಿತು. ಈ ಲ್ಯಾನ್ಸ್ ನ್ಯಾಕ್ ಮುರುಗನ್ ರೈಲ್ವೇ ಸ್ಟೇಷನ್‌ನಲ್ಲಿ ತನ್ನ ರೈಲಿಗಾಗಿ ಕಾಯುತ್ತಿದ್ದಾಗ ಒಂದು ಹುಡುಗಿ ಅಳುತ್ತಾ ಬಂದು ತನ್ನ ತಂದೆ ದೆಹಲಿಯ ದೊಡ್ಡ ಆಫೀಸರ್ ಹಠಾತ್ತಾಗಿ ತೀರಿ ಹೋಗಿದ್ದಾರೆಂದೂ, ತನಗೆ ತುರ್ತಾಗಿ ದೆಹಲಿಗೆ ಹೋಗಬೇಕಾಗಿದ್ದರೂ, ಸ್ಲೀಪರ್‌ನಲ್ಲಿ ಸೀಟ್ ಸಿಗಲಿಲ್ಲವೆಂದೂ ಗೋಗರೆದಳಂತೆ. ಹೀಗಾಗಿ ಈ ಸೈನಿಕ ತನ್ನ ಸೀಟನ್ನು ಹೇಗೋ ಮಾಡಿ ಆ ಹುಡುಗಿಗೆ ಕೊಡಿಸಿದನಂತೆ. ನಂತರ ಆತ ಕರ್ನಲ್ ಸಾಹೇಬರಿಗೆ ನೀಡಿದ ತಂತಿ ಸಂದೇಶದಲ್ಲಿ ನನ್ನ ಬರ್ತನ್ನು ಒಂದು ಹುಡುಗಿಗೆ ಕೊಡಬೇಕಾದ್ದರಿಂದ ನಾನು ಮರುದಿನ ಬರುವವನಿದ್ದೇನೆ – ಎಂದು ಅರಿಕೆ ಮಾಡಿದ್ದನಂತೆ. ಆದರೆ ಆ Birth ಎನ್ನುವ ಪದ Birth ಆಗಿ ಈತ ಒಂದು ಹುಡುಗಿಗೆ ಜನ್ಮ ನೀಡಿದ – ಎಂಬ ಅರ್ಥದ ಸಂದೇಶ ಮೇಲಾಧಿಕಾರಿಗೆ ರವಾನೆಯಾಗಿ ಇದೊಂದು ಮೋಜಿನ ಪ್ರಸಂಗವಾಗಿ ಬಿಟ್ಟಿತ್ತು!

ಹಳ್ಳಿ ಹೈದನನ್ನು ಕಾಲೇಜು ಓದಿಸ್ಲಿಕ್ಕಾಗಿ ಬೆಂಗಳೂರು ಸಿಟಿಗೆ ಕಳುಹಿಸುವಾಗ ನೆಲಮಂಗಲದ ಪಕ್ಕದ ಹಳ್ಳಿಯ ಪುಟ್ಟಯ್ಯ ತಾಕೀತು ಮಾಡಿದ್ನಂತೆ – ಅಲ್ಲಿ ಮುಟ್ಟಿದ ಕೂಡ್ಲೆ ತಾರು ಕಳಿಸಪ್ಪಾ – ಅಂತ.

ಆದರೆ ಮಗ ಕಳಿಸಿದ ತಾರನ್ನು ಬೇರೆಯವರ ಹತ್ತಿರ ಓದಿಸಿದ ಪುಟ್ಟಯ್ಯ ಮತ್ತು ಮನೆಯವರೆಲ್ಲಾ ಗೋಳೋ ಅಂತ ಅಳಲಾರಂಭಿಸಿದರಂತೆ. ಆಮೇಲೆ ತಿಳಿದು ಬಂತು. ಈ ಭೂಪ ತನ್ನ ಅರ್ಥಂಬರ್ಥ ಇಂಗ್ಲಿಷ್ ಪಾಂಡಿತ್ಯವನ್ನು ಬಳಸಿ 'ನಾನು ಚೆನ್ನಾಗಿದ್ದೇನೆ' ಎಂಬ ಸಂದೇಶ ಕಳಿಸಲಿಕ್ಕಾಗಿ ಉಪಯೋಗಿಸಿದ ಶಬ್ಧಗಳೆಂದರೆ – 'ಐ ಯಾಮ್ ಇನ್‌ದ ವೆಲ್.'

ಪುಟ್ಟಯ್ಯಾ ಮತ್ತು ಮನೆಯವರು ಬೊಬ್ಬೆ ಹೊಡೆದೇ ಹೊಡೆದರು – 'ಬಾವಿಗೆ ಬಿದ್ನಂತಪ್ಪೋ ನಂ ಹೈದ' ಅಂತ!

✵

---

## ಮಾಡರ್ನ್ ಲೀವ್ ಲೆಟರ್

ಇವರಿಗೆ,

**ಹೆಡ್ ಮಾಸ್ತರ್ – ನಮ್ಮ ಸ್ಕೂಲು – ನಮ್ಮೂರು**

ಇವರಿಂದ

**ನಾನು – ನಿಮ್ಮ ಸ್ಕೂಲು – ಇದೇ ಊರು**

**ವಿಷಯ : ರಜಾ ಬೇಕು**

ನೋಡಿ ಸರ್, ನೀವು ಏನ್ ಮಾಡ್ತೀರೋ ಮಾಡ್ಕೊಳಿ. ನನಗೆ ಸ್ವಲ್ಪ ಕೆಲಸ ಇದೆ. ನಾನು ಇವತ್ತು ಬರೋದಿಲ್ಲ ಅಷ್ಟೆ.

ವಂದನೆಗಳು

**ನಿಮ್ ಶಿಷ್ಯ**

**ಡೇಟ್:** ಇವತ್ತೇ

**ಪ್ಲೇಸ್:** ಇದೇ ಊರು

**(ಅಪರಂಜಿಗೆ ಇಮೇಲ್‌ನಲ್ಲಿ ಬಂದಿದ್ದು)**

# ಯಾಕೆ ಮೂರ್ಖನಾದ್ಯೋ

**- ಅರುಧಂತಿ ಜೋಶಿ**

''**ಶು**ದ್ಧ ಅವಿವೇಕಿ! ನಿನ್ನ ದಡ್ಡ ತಲ್ಯಾಗ ಇಷ್ಟೂ ಹೊಳೀಲಿಲ್ಲಾಂದ್ರ ಏನ್ಹೇಳೋಣ! ನೋಡ್ದೋರು ಶತಮೂರ್ಖಂತ ಹಣೆಪಟ್ಟಿನ ಹಚ್ತಾರಷ್ಟೇ.'' ಅಜ್ಜಿಯ ಪ್ರಲಾಪ ಕೇಳಿ, ''ಯಾಕಜ್ಜಿ ಅಣ್ಣಯ್ಯನ ಬಯ್ತಿಯಾ? ಅವನೇನು ತಪ್ಮಾಡ್ಯಾನ? ಗೊತ್ತಾಗ್ದೆ ಹಾಂಗ ಮಾಡ್ಯಾನ. ಅದ್ರಾಗ ಅವನ್ದ್ಯಾವ ತಪ್ಪದ ಹೇಳೆ.'' ಜಾಣೆ ಅನಿಸ್ಕೊಂಡ ಮೊಮ್ಮಗಳು, ಅಣ್ಣನ ಪರ ವಕಾಲತ್ತು ವಹಿಸಿಕೊಂಡು ಬಂದಾಗ, ಅಜ್ಜಿಗೆ ಕಿರಿಕಿರಿ.

''ಭೇಷ್! ಬೇಲಿಗೆ ಏತಿ ಕೋತಸಾಕ್ಷಿ ಇದ್ಹಾಗ, ಇನ್ನು ನೀನೂ ಸೇರ್ಕೊಂಡ್ಯಂದ್ರ ಮುಗೀತು. ತಿಳಿಗೇಡಿಗೆ ತಿಳಿವಳಿಕೆ ಬರೋದು ಯಾವಾಗ?''

ಪೆದ್ದ ಅನಿಸ್ಕೊಂಡು, ಪದ್ಮನಾಭ ಎಡವಟ್ಟು ಮಾಡ್ಕೋತ ಎಡವಿ ಬೀಳೋದ್ರಾಗ ಎತ್ತಿದ ಕೈ. ಬರೋಬರಿ ಯೋಚ್ನೆ ಮಾಡಿ, ಕೆಲಸ ಮಾಡಬೇಕಂತ, ತಲಿ ಬಿಸಿ ಮಾಡ್ಕೊಳ್ಳೊ ಜಾಯಮಾನದವನಲ್ಲ, ತೋಚಿದ್ದನ್ನ ಮಾಡೋ ಭೂಪ. ಬಹುತೇಕ ಇದರಿಂದಾಗಿ ಉಲಟಾ ಪರಿಣಾಮ ಆಗ್ತಿದ್ದ ಸಂದರ್ಭಾನೇ ಹೆಚ್ಚು. ಹೀಗಾಗಿ ಅವನಿಗೆ ಪೆದ್ದ, ಮೂರ್ಖಂತ ಅಡ್ಡ ಹೆಸರ್ನಿಂದ ನಾಮಾರ್ಚನೆ ನಡೀತಿತ್ತು.

> **ತಿಳಿಗೇಡಿಗೆ ತಿಳುವಳಿಕೆ ಬರುವುದು ಯಾವಾಗ?**

ನಿಜ ಹೇಳ್ಬೇಕಂದ್ರ, ''ದೊಡ್ಡವರೆಲ್ಲ ಜಾಣರಲ್ಲ, ಚಿಕ್ಕವರೆಲ್ಲ ಕೋಣರಲ್ಲ'', ಹಾಡು ನೆನಪಾಗ್ತದ. ಜಾಣರೆಲ್ರೂ ತಾವು ದಡ್ಡರಲ್ಲಂತ ಬೀಗ್ತಿದ್ರೂ, ಒಮ್ಮೊಮ್ಮೆ ಎಡವಿ ಮುಗ್ಗರಿಸಿದ ಪ್ರಸಂಗಗಳು ಒದಗಿ ಬಂದಿರ್ಲಿಕ್ಕೆ ಬೇಕಲ್ಲ! ಆಗ ಜಾಣರೂ ದಡ್ಡರಾಗಿ ಬಿಡ್ತಾರ. ದಡ್ಡ ಕೆಲಸ ಮಾಡಿದ್ಮ್ಯಾಲ ತಪ್ಪೊಪ್ಪಿಗೆ ನೀಡೋ ಎದೆಗಾರಿಕೆ ಎಷ್ಟು ಜಾಣರಲ್ಲಿರ್ತದೊ ಗೊತ್ತಿಲ್ಲ. ''ಹಾಗಲ್ಲ, ಅದು ಹೇಗಾಯ್ತಂದ್ರ'', ಎಂದು ತಮ್ಮನ್ನ ತಾವೇ ಸಮರ್ಥಿಸಿ ಕೊಳ್ಳೋವ್ರ ಸಂಖ್ಯೆ ಜಾಣರಂದ್ಕೊಂಡವ್ರ ಪೈಕಿ ಹೆಚ್ಚು.

ಈ ರೀತಿಯ ತರ್ಕ ಮನಸ್ನಾಗ ಹುಟ್ಕೊಂಡಾಗ, "All Fools Day" ದಿನಾಚರಣೆ ಏಪ್ರಿಲ್ ಒಂದನೇ ತಾರೀಖಂತ, ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಆಚರಣೆಯಲ್ಲಿದ್ದರೆ, ನಮ್ಮ ದೇಶಕ್ಕೂ ಲಗ್ಗೆ ಇಟ್ಟು, ಮೂರ್ಖರ ದಿನಾಚರಣೆ ಅಂತ ಸಂಭ್ರಮಿಸುತ್ತಿರೋದು ನೆನಪಾಯ್ತು. ''ಜಾಣರಿಗೂ ಒಂದು ದಿನಾಚರಣೆ ಅಂತ ನಿಗದಿ ಪಡಿಸಿದ್ದಾರೇನು? ಹೀಂಗೆ ಜಾಣರು ಗೊಣಗ್ತಾರಂದ್ರ ಅದಂತೂ ಸಹಜಾನೇ ಬಿಡಿ, ಜಾಣರೂ ಶುದ್ಧ ಮೂರ್ಖರಾಗ್ತಾರಂತ ಸಾಬೀತು ಮಾಡೊ ದಿನಾಂತ ಆದ್ರೆ, ಕಾಲೆಳೆಯೋ ಕಸರತ್ತು ನಡಿತಿರುತ್ತೆ.

ಇಂಥದ್ದೊಂದು ಪ್ರಸಂಗದಲ್ಲಿ ಭಾಗಿಯಾಗಿದ್ದು ನೆನಪಾಗ್ತಿದೆ. ಈ ಮಹಾನಗರಿಯಲ್ಲಿ, ಒಂದು ಪ್ರತಿಷ್ಠಿತ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ವೃತ್ತಿ ಜೀವನದಲ್ಲಿ ಮೊದಲ ಹೆಜ್ಜೆ ಇಟ್ಟಾಗ, ನನಗೆ ಸೀನಿಯರಾಗಿದ್ದ ಕೆಲವರು ಅಲ್ಲಿ ನನ್ನ ಸಹೋದ್ಯೋಗಿಗಳಾಗಿದ್ದರು. ಬಿಡುವು

ದೊರೆತಾಗ, ಸ್ಟಾಫ್ ರೂಮಿನಲ್ಲಿ ಭೇಟಿಯಾಗುತ್ತಿದ್ದೆವು. ಹರಟೆ ಹಾಸ್ಯ ಎಂದು ಲವಲವಿಕೆಯಿಂದ ಸಮಯ ಸಾಗಿದ್ದೇ ಗೊತ್ತಾಗ್ತಿರಲಿಲ್ಲ. ಒಮ್ಮೆ ಭೋಜನದ ವಿರಾಮದಲ್ಲಿ ಮಹಿಳಾ ಉಪನ್ಯಾಸಕಿಯರು ಹರಟುತ್ತಿದ್ದೆವು. ಮಾಲತಿ ಮೇಡಂ, ಒಂದು ಮಹತ್ವದ ವಿಚಾರವನ್ನು ಮುಂದಿಟ್ಟರು.

''ಮುಂದಿನ ಬುಧವಾರ ಏಪ್ರಿಲ್ ಒಂದನೇ ತಾರೀಖು, ನೆನಪಿದೆಯಾ? ನಾವೆಲ್ಲರೂ ಅದನ್ನು ವಿಶಿಷ್ಟ ರೀತಿಯಲ್ಲಿ ಆಚರಿಸೋಣ. ಪುರುಷ ಉಪನ್ಯಾಸಕರನ್ನು ಮೂರ್ಖರನ್ನಾಗಿ ಮಾಡಿದರೆ ಹೇಗೆ?''

ನಮ್ಮಲ್ಲಿ ಕೆಲವರು ಹಿಂಜರಿಕೆ ತೋರಿದರೂ, ಉಳಿದವರೆಲ್ಲ ಒಪ್ಪಿದಾಗ ಕಾರ್ಯರೂಪಕ್ಕೆ ಇದನ್ನು ಅಳವಡಿಸಲು ಮುಂದಾದೆವು. ಕಲಾಮೇಡಂನ ಸುಂದರ ಕೈಬರಹದಲ್ಲಿ ಇದನ್ನು ಕಾರ್ಯರೂಪಕ್ಕೆ ತರಲು, ಆಹ್ವಾನ ಪತ್ರಿಕೆ ತಯಾರಾಯಿತು. ನಾಲಕ್ಕು ಜನ ಪ್ರೊಫೆಸರ್ ಮಹಾಶಯರು, ಎಂಟು ಮಂದಿ ಪುರುಷ ಉಪನ್ಯಾಸಕರು ಸೇರಿ, ಒಟ್ಟು ಹನ್ನೆರಡು ಜನರನ್ನು ಆಹ್ವಾನಿಸಲು ಮಾಲತಿ ಮೇಡಂ ಸ್ಟಾಫ್ ರೂಮಿಗೆ ರಾಯಭಾರಿಯಂತೆ ಹೊರಟರು, ಸ್ಥೂಲ ಶರೀರವಾದರೂ ಬಳುಕುತ್ತ ನಡೆದರು.

''ಬೇಸಿಗೆ ರಜ ಶುರುವಾಗುವುದಕ್ಕೆ ಮೊದಲು, ಮುಂದಿನ ಬುಧವಾರ, ಮಹಿಳಾ ಉಪನ್ಯಾಸಕಿಯರ ಅಪೇಕ್ಷೆಯಂತೆ ''ಗೇಟ್ ಟು ಗೆದರ್'' ಆಯೋಜಿಸುತ್ತಿದ್ದೇವೆ. ವಿದ್ಯಾರ್ಥಿಗಳ ಪರೀಕ್ಷೆಗಳೆಲ್ಲ ಮುಗಿದಿರುವುದರಿಂದ ಈಗ ಬಿಡುವುದಿಯಲ್ವೇ. ಎಲ್ಲರೂ ತಪ್ಪದೇ ಬೆಳಗ್ಗೆ 10 ಗಂಟೆಗೆ ಬರಬೇಕು'' ಎಂದು ಆಹ್ವಾನ ಪತ್ರಿಕೆಯನ್ನು ಕೊಟ್ಟು ಬಂದರು.

ಮಾರ್ಚ್ 31ನೇ ತಾರೀಖು ಮನೆಗೆ ತೆರಳುವ ಮೊದಲು ಒಂದನೇ ನಂಬರಿನ ಕೊಠಡಿಯನ್ನು ಅಲಂಕರಿಸಿ, ಬ್ಲಾಕ್ ಬೋರ್ಡಿನ ಮೇಲೆ ''ಏಪ್ರಿಲ್ ಫೂಲ್'' ಎಂದು ಬರೆದಿದ್ದೆವು.

ನಮ್ಮ ಆಹ್ವಾನವನ್ನು ಸ್ವೀಕರಿಸಿ ಅವರೆಲ್ಲರೂ ಆ ಖೋಲಿಯಲ್ಲಿ ಬಂದಿರುವರೆಂದು ಗೊತ್ತಾದ ಮೇಲೆ, ನಾವೆಲ್ಲರೂ ಅಲ್ಲಿ ಪ್ರತ್ಯಕ್ಷರಾದೆವು. ಕೊನೆಯದಾಗಿ ಮಾಲತಿ ಮೇಡಂ ಎಂಟ್ರಿ ಕೊಟ್ಟಾಗ,

''ಏನ್ರೀ ಹೀಗೆ ನಮ್ಮನ್ನು ಮೂರ್ಖರನ್ನಾಗಿ ಮಾಡಿ ಬಿಟ್ರಲ್ರೀ'' ಎಂದು ಕೆಲವರು ಬೇಜಾರು ಮಾಡಿಕೊಂಡರು. ಸ್ಪೋರ್ಟಿವಾಗಿ ಇದನ್ನು ಸ್ವೀಕರಿಸಿದ ಉಳಿದೆಲ್ಲರೂ, ''ಪರವಾಗಿಲ್ರೀ, ನಮ್ಮಲ್ಲಿ ಯಾರಿಗೂ ಇವತ್ತು ಮೂರ್ಖರ ದಿನವೆಂದು ನೆನಪಾಗಲೇ ಇಲ್ಲ. ನಿಜವಾಗಲೂ ನಾವು ದಡ್ಡರು'' ಎಂದು ನಗುತ್ತ ಒಪ್ಪಿಕೊಂಡರು. ''ಹೋಗಲಿ ಬಿಡಿ. ಕಾಫಿ, ತಿಂಡಿ ಕೊಟ್ಟು ಈ ಮೂರ್ಖರನ್ನು ಖುಷಿ ಪಡಿಸ್ತೀರೋ ಇಲ್ವೋ ಹೇಳಿ.'' ನಮ್ಮ ಮಾಲತಿ ಮೇಡಂ ಹೊರಗಿದ್ದವರನ್ನು ಸನ್ನೆ ಮಾಡಿ ಕರೆದರು. ಹೊರಗೆ ತಯಾರಾಗಿಟ್ಟಿದ್ದ ತಿಂಡಿ ಕಾಫಿಯನ್ನು ತರಿಸಿ, ಸತ್ಕರಿಸಿ ಬೀಳ್ಕೊಟ್ಟೆವು. ಈ ದಿನದಂದು ಶಾಲೆಯ ಮಕ್ಕಳೂ ಸಹ ಒಬ್ಬರೊನ್ನಬ್ಬರು ಮೂರ್ಖರನ್ನಾಗಿ ಮಾಡುವ ಹುನ್ನಾರ ಮಾಡ್ತಿದ್ರು.

''ಸುಮಾ! ನಿನ್ನ ಕಾಲ್ಮೇಲೆ ಜಿರಲೆ ಹತ್ತಿದೆ ನೋಡು'', ಎಂದು ಹೇಳಿದರೆ ''ಎಲ್ಲಿ? ಎಲ್ಲಿ'' ಎಂದವಳು ಗಾಬರಿಯಿಂದ ಕುಣಿತಿದ್ರೆ, ಗೆಳತಿಯರೆಲ್ಲ ''ಏಪ್ರಿಲ್ ಫೂಲ್'' ಡಬ್ಬಾಗುಲ್'', ಎಂದು ಚಪ್ಪಾಳೆ ತಟ್ಟುತ್ತ ಅವಳನ್ನು ಘೆರಾವ್ ಮಾಡ್ತಿದ್ದರು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ನಂತರವೂ ಪಾಶ್ಚಾತ್ಯ ಸಂಸ್ಕೃತಿ ಉಳಿದು ಕೊಂಡಿರುವುದಕ್ಕೆ ಈ ದಿನವೇ ಸಾಕ್ಷಿ. ವಿಶ್ವದೆಲ್ಲೆಡೆ ಜಾಗತೀಕರಣದ ಅಲೆ ಎದ್ದು, ಅದರ ಒಂದು ಅಂಗವಾಗಿ ಮನೆ ಮನೆಯಲ್ಲೂ ಮೂರ್ಖರ ಪೆಟ್ಟಿಗೆ ಎಂದು (Idiot box) ಪ್ರಖ್ಯಾತಿ ಪಡೆದಿರುವ ಟೆಲಿವಿಶನ್ (ಟಿ.ವಿ) ಭದ್ರ ಬುನಾದಿ ಹಾಕಿಕೊಂಡು ಕುಳಿತು ಬಿಟ್ಟಿದೆ. ಕಪ್ಪು ಬಿಳಿಪು ಟಿ.ವಿ. ಮಾಯವಾಗಿ ಕಲರ್ ಟಿ.ವಿ. ಅದರ ಸ್ಥಾನವನ್ನು ಆಕ್ರಮಿಸಿಕೊಂಡು ರಂಜಿಸುತ್ತಿರುವುದು. ಈಗಿನ ಜಾಗತೀಕರಣದ ಯುಗದಲ್ಲಿನ ಬೆಳವಣಿಗೆಗಳಲ್ಲಿ ಒಂದಾಗಿ ನುಸುಳಿ ಕೊಂಡು, ತಳ ಊರಿಕೊಂಡಿರುವ ಸತ್ಯಾಂಶ. Idiot box ಎಂದೇ ಇಂಗ್ಲೀಷಿನಲ್ಲಿ ಚಾಲ್ತಿಯಲ್ಲಿದ್ದರೆ, ಸಿರಿಗನ್ನಡದಲ್ಲಿ ಮೂರ್ಖರ ಪೆಟ್ಟಿಗೆಯೆಂದು ಮರುನಾಮಕರಣ ಪಡೆದಿದ್ದರೂ, ಮೂರ್ಖರಿಗಷ್ಟೇ ಮೀಸಲಾದ ಕಾರ್ಯಕ್ರಮಗಳು ಪ್ರಸಾರವಾಗುತ್ತದೆ ಎಂದರ್ಥವಲ್ಲ, ಜಾಣರೂ ಸಹ ಈಗ ಹೊತ್ತಿನ ಪರಿವೆಯಿಲ್ಲದೆ ಅದರ ಮುಂದೆ ಆಸೀನರಾಗಿ ತಿರುಳಿರುವ, ತಿರುಳಿಲ್ಲದ ಧಾರಾವಾಹಿಗಳು, ಸಿನಿಮಾಗಳು, ಕ್ರಿಕೆಟ್, ಫುಟ್‌ಬಾಲ್ ಪಂದ್ಯಗಳನ್ನು ಎದೆಯಿಕ್ಕದೇ ನೋಡುವಂತೆ ಮಾಡುತ್ತಿರುವಾಗ ಇದು ಜಾಣರ ಪೆಟ್ಟಿಗೆಯೋ ಅಥವಾ ಮೂರ್ಖರ ಪೆಟ್ಟಿಗೆ ನಾ ಎಂದು ಗೊಂದಲವನ್ನು ಸೃಷ್ಟಿ ಮಾಡಿ ಬಿಡುತ್ತದಲ್ವೇ?

ಮೂರ್ಖರ ಪೆಟ್ಟಿಗೆಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಪ್ರಸಾರ ಮಾಡುವ ಟಿ.ವಿ. ಚಾನಲ್ಗಳನ್ನು ನಡೆಸುತ್ತಿರುವವರು, ತಾವು ನೀಡುವ ಕಾರ್ಯಕ್ರಮದ ವೇಳಾಪಟ್ಟಿಯಲ್ಲಿ ಅರ್ಧದಷ್ಟು ಭಾಗ ಜಾಹೀರಾತುಗಳಿಂದ ತುಂಬಿ, ಅದರ ಲಾಭ ಪಡೆಯುವ ಜಾಣರು. ಆದ್ದರಿಂದ ಆರ್ಥಿಕವಾಗಿ ಬೆಳೆಯಲು ಅವರಿಗಿದು ಜಾಣರ ಪೆಟ್ಟಿಗೆ. ನೋಡುವ ವೀಕ್ಷಕ ವೃಂದ ತೋರಿಸಿದ ಜಾಹಿರಾತನ್ನು ದೃಶ್ಯಗಳನ್ನು ಪದೇ ಪದೇ ನೋಡುತ್ತ, ಗೂಟ ಬಡಿದವರ ಹಾಗೆ ಟಿ.ವಿ.ಯ ಮುಂದೆ ಕುಳಿತು ನೋಡುವ ಮೂರ್ಖರಾದಾಗ ಅವರ ಪಾಲಿಗೆ ಮೂರ್ಖರ ಪೆಟ್ಟಿಗೆಯಾಗಿ ಬಿಡುತ್ತೆ. ಇದು ಮೂರ್ಖತನವೋ, ಜಾಣತನವೋ ಎಂದು ವಿಶ್ಲೇಷಣೆಗೂ ಮೀರಿದ ಯಕ್ಷಪ್ರಶ್ನೆಯಾಗಿ ಉಳಿದಿದೆ.

ಒಟ್ಟಿನಲ್ಲಿ ಯಾರು ಜಾಣರು, ಯಾರು ಮೂರ್ಖರು ಈ ಜಗದೊಳು ಎನ್ನುವ ಪ್ರಶ್ನೆಗೆ ನಿಮ್ಮಲ್ಲಿ ಉತ್ತರವಿದೆಯೇ?

✵

---

**ಸುಳ್ಳು ಹೇಳುವುದೆಂದರೆ**

ಚಿಕ್ಕ ಮಗುವಿಗೆ ಪಾಪ, ದೊಡ್ಡವರಿಗೆ ತಪ್ಪು
ಪ್ರೇಮಿಗೆ ಒಂದು ಕಲೆ, ಲಾಯರಿಗೆ ವೃತ್ತಿ
ರಾಜಕಾರಿಣಿಗೆ ಅವಶ್ಯಕತೆ, ಬಾಸ್‌ಗೆ ಆಡಳಿತಾತ್ಮಕ ತಂತ್ರ
ಬ್ರಹ್ಮಚಾರಿಗೆ ಒಂದು ವರ, ಸಹೋದ್ಯೋಗಿಗೆ ಒಂದು ನೆಪ
ಮದುವೆಯಾದವನಿಗೆ ಬದುಕೋಕೆ ಬೇಕಾದ ಇಂಧನ

ಬ್ರೇಕಿಂಗ್ ನ್ಯೂಸ್

# ಶುದ್ಧ ಅಸುದ್ದಿ

- ಎಚ್ಚೆನ್ಎ

**ಎಂ**ಟು ಸಾವಿರ ಮಂದಿ ಭಾರತೀಯರು ಮಂಗಳ ಗ್ರಹಕ್ಕೆ ಹೋಗಲು ಅರ್ಜಿ ಸಲ್ಲಿಸಿದ್ದಾರೆ ಎಂದು ಸುದ್ದಿ. ಇವರಲ್ಲಿ ಬಹುತೇಕರು ಪುರುಷರೇ ಎಂದು ಹೇಳಲಾಗಿದೆ. ಸಾರಾ ಜಹಾಂಸೆ ಅಚ್ಛಾ ಹಿಂದೂಸ್ತಾನ್ ಎಂದು ಯಾರೋ ಹಾಡಿರಬಹುದು. ಆದರೆ ಈ 8000 ಮಂದಿ ಸಾರಾ ಜಹಾಂಸೆ ಅಚ್ಛಾ ಮಂಗಳ ಗ್ರಹ ಎಂದು ಭಾವಿಸಿರಲಿಕ್ಕೆ ಸಾಕು. ಭಾರತದಲ್ಲಿನ ಜೀವನದಿಂದ ಅವರು ರೋಸಿ ಹೋಗಿದ್ದು ಮಂಗಳ ಗ್ರಹದಲ್ಲಿ ಪರಿಸ್ಥಿತಿ ಚೆನ್ನಾಗಿಲ್ಲದಿದ್ದರೂ ಅಲ್ಲೇ ನೆಲೆಸಲು ಬಯಸಿದ್ದಾರೆ. ಆದರೆ ಮಹಿಳೆಯರನ್ನು ಬಿಟ್ಟು ಬರೇ ಪುರುಷರೇ ಹೋದರೆ ಏನು ಚೆನ್ನ? ಎಂದು ಯಾರೋ ಕೇಳಿದ್ದಾರೆ. ಆದರೆ ಸ್ವಾಮಿ ಅವರು ಆ ಕಾರಣಕ್ಕೇ ಅಲ್ಲಿ ಹೋಗಲು ಬಯಸಿರಬಹುದಲ್ಲವೆ?

★★★

**ಅ**ಲ್ಟ್ರಾ ಹೈ ನೆಟ್ ವರ್ತ್ ಮಹಿಳೆಯರ ಬಗ್ಗೆ ಕೇಳಿದ್ದೀರ? ಗಣ್ಯರಲ್ಲಿ ಅತಿ ಗಣ್ಯರಿರುವಂತೆ ಇವರು ಶ್ರೀಮಂತರಲ್ಲಿ ಅತಿ ಶ್ರೀಮಂತರು. ಅಂದರೆ ಇವರ ತಲಾ ಆಸ್ತಿ 30 ದಶಲಕ್ಷ ಡಾಲರ್‌ಗಿಂತ ಹೆಚ್ಚಿರುತ್ತದೆ. ಇಂತಹ 1250 ಮಂದಿ ಅಲ್ಟ್ರಾ ಹೈ ನೆಟ್ ವರ್ತ್ ಮಹಿಳೆಯರು ಭಾರತದಲ್ಲಿ ಇದ್ದಾರೆಂದು ಒಂದು ಸಮೀಕ್ಷೆ ತಿಳಿಸಿದೆ. ಇವರಲ್ಲಿ 750 ಮಂದಿ ಬೆಂಗಳೂರಿನಲ್ಲೇ ಇದ್ದಾರಂತೆ! ಇವರಿಗೆಲ್ಲ ಮದುವೆಯಾಗಿದೆಯೆ ಸರ್? ಎಂದು ವೆರಿ ಎಲಿಜಬಲ್ ಬ್ಯಾಚುರಲ್ ಒಬ್ಬರು ಗುಟ್ಟಾಗಿ ಕೇಳಿದ್ದಾರೆ. ಗೊತ್ತಿಲ್ಲ ಸರ್.

★★★

**ಇ**ವತ್ತು ಡಿವಿಜಿ ಬದುಕಿದ್ದಿದ್ದರೆ ಅವರು ಮಂತ್ರಿ ಮಹೋದಯ ಮನೀಷ್ ತಿವಾರಿ ಪತ್ರಕರ್ತರಿಗಾಗಿ ನಡೆಸಬೇಕು ಎಂದಿರುವ ಪರೀಕ್ಷೆಗೆ ಕೂರಬೇಕಾಗಿ ಬರುತ್ತಿತ್ತು. ಎಲ್ಲಾ ವೃತ್ತಿಗಳಿಗೂ ಪರೀಕ್ಷೆ ಇರುವಂತೆ ಪತ್ರಕರ್ತರಿಗೂ ನಡೆಸಬೇಕು ಮತ್ತು ಅದರಲ್ಲಿ ಅರ್ಹರಾದವರು ಮಾತ್ರ ಪತ್ರಕರ್ತರಾಗಬೇಕು ಎಂದು ತಿವಾರೀಜಿ ಸಲಹೆ ಮಾಡಿದ್ದಾರೆ. ಆದುದರಿಂದ ಡಿವಿಜಿ ಸಹ ಈ ಪರೀಕ್ಷೆಯಲ್ಲಿ ಪಾಸಾಗಬೇಕು ಅಲ್ಲವೆ? ಅಂದಹಾಗೆ ಈ ಪರೀಕ್ಷೆಯಲ್ಲಿ ನಪಾಸಾದವರು ಏನು ಮಾಡಬೇಕು? ಅರೆ! ಕೇಳುವುದೇನು? ರಾಜಕಾರಣಿ ಆಗಬಹುದು.

★★★

**ಮ**ದುವೆ ಎಂಟು, ಗಂಡ ಏಳು! ಛೆ! ಇದು ಹೊಸ ಕನ್ನಡ ಸೀರಿಯಲ್‌ನ ಟೈಟಲ್ ಖಂಡಿತ ಅಲ್ಲ, ಇದು ಎಲಿಜಬೆತ್ ಟೇಲರ್ ಎಂಬ (ಆ ಕಾಲತ್ತಿಲ್) ಖ್ಯಾತ ತಾರೆಯ

ಮದುವೆ ಸಾಹಸ. ಅಂದರೆ ಆಕೆ ಎಂಟು ಬಾರಿ ಮದುವೆಯಾದಳು. ಒಂದು ಮದುವೆಗೇ ಸುಸ್ತಾಗುವ (ಅಥವಾ ಪೆಚ್ಚಾಗುವ) ನಾವು ಈಕೆ ಎಂಟು ಬಾರಿ ಮದುವೆಯಾಗಿದ್ದಳು ಎಂದರೆ ಅವಳನ್ನು 24 ಬೈ 27 ಮದುವಣಗಿತ್ತಿ ಎಂದೇ ಕರೆಯಬಹುದೇನೋ. ಇರಲಿ. ಎಂಟು ಮದುವೆ ಆದರೆ ಏಳು ಗಂಡ (ಡಾಂತರ?) ಎಂದರೆ ಹೇಗೆ ಎಂದಿರಾ? ಅದೇ ಸ್ವಾಮಿ ಅವಳು ಒಬ್ಬ ಗಂಡನನ್ನು ಎರಡು ಬಾರಿ ಮದುವೆ ಆಗಿದ್ದಳು. ಈಗೇಕೆ ಅವಳ ಸುದ್ದಿ ಎಂದರೆ ಈಗ ಸಲ್ಮಾನ್ ರಶ್ದೀ ಸಾಹೇಬ್ರು ಅದೇ ದಾರಿ ಹಿಡಿಯಲು ಹೊರಟಿದ್ದರೇನೋ ಅದಕ್ಕೆ ಅವರ ಮಕ್ಕಳು ಬ್ರೇಕ್ ಹಾಕಿದ್ದಾರೆ. ನಾಲ್ಕು ಬಾರಿ ಮದುವೆಯಾಗಿರುವ ಅವರಿಗೆ ನೊ ಮೋರ್ ಪ್ಲೀಸ್ ಎಂದು ಹೇಳಿ ಆಗಬಹುದಾಗಿದ್ದ ಐದನೆಯ ಮದುವೆಗೆ ತಡೆಯಾಜ್ಞೆ ನೀಡಿದ್ದಾರೆ. ಪಾಪ! ರಶ್ದೀ ಸಾಹೇಬರ 5ನೆಯ ಹೆಂಡತಿಯಾಗಲು ಹೊಂಚು ಹಾಕಿದ್ದವಳಿಗೆ ನಿರಾಶೆಯಾಗಿರಲಿಕ್ಕೆ ಸಾಕು. ಆದರೆ 5ನೆಯ ಮದುವೆ ಸಾಹೇಬ್ರ ಹಣೆಯಲ್ಲಿ ಬರೆದಿದ್ದರೆ ವಿಧಿ ಬರಹವನ್ನು ತಪ್ಪಿಸಲು ಮಕ್ಕಳಿಂದ ಸಾಧ್ಯವೆ? ನೋಡೋಣ. ಆಗ ಈ ಪುರುಷ ದ್ರೌಪದಿಯ ಬಗ್ಗೆ ಇಲ್ಲಿ ಖಂಡಿತ ಬರೆಯುತ್ತೇವೆ.

★★★

**ಮ**ಹಮದ್ ಅಜರುದ್ದಿನ್ ಕ್ರಿಕೆಟಿಗರೋ, ರಾಜಕಾರಣಿಯೋ? ಮಾಜಿ ಕ್ರಿಕೆಟಿಗ ಹಾಲಿ ರಾಜಕಾರಣಿ ಎಂದು ಹೇಳಬಹುದು. ಆದರೆ ಈಗವರು ಮತ್ತೆ ಕ್ರಿಕೆಟ್ ಬ್ಯಾಟ್ ಹಿಡಿಯಲು ಹೊರಟಿದ್ದಾರೆ. ಅಂದರೆ ಟೆಸ್ಟ್‌ನಲ್ಲಿ ಆಡುವರೆ? ನೊ ಚಾನ್ಸ್. ಮತ್ತೆ ಬ್ಯಾಟ್? ಈಗವರು ಕೋಚ್ ಆಗಲು ತಯಾರಿ ನಡೆಸಿದ್ದಾರೆಂದು ಸುದ್ದಿ. ಓಹೋ! ಮೊದಲು ಕ್ರಿಕೆಟ್ ಕಲಿಸಿ ನಂತರ, ಅವರು ಮಾಡಿದಂತೆ, ರಾಜಕಾರಣಿ ಆಗುವುದು ಹೇಗೆ ಎಂದೂ ಕಲಿಸಲು ಸಾಧ್ಯ ಅವರ ಅಕಾಡೆಮಿಯಲ್ಲಿ. ಟು ಇನ್ ಒನ್ ಕೆರಿಯರ್. ಅಂದಹಾಗೆ ಎರಡರಲ್ಲೂ ಹೇರಳವಾಗಿ ಹಣವಿದೆ – ಮಿಂಚುವವರಿಗೆ.

★★★

**ಐ**ದು ಸಾವಿರ ಕಿಲೋ ಕಡ್ಲೆಹಿಟ್ಟು, 10,000 ಕಿಲೋ ಸಕ್ಕರೆ, 1000 ಕಿಲೋ ಗೋಡಂಬಿ, 350 ಕಿಲೋ ಏಲಕ್ಕಿ, 500 ಕಿಲೋ ತುಪ್ಪ ಮತ್ತು 750 ಕಿಲೋ ದ್ರಾಕ್ಷಿ ಇವೆಲ್ಲ ಸೇರಿದರೆ ಏನಾಗುತ್ತದೆ? ತಿರುಪತಿ ಲಡ್ಡು! ಪ್ರತಿ ದಿನ ಇಷ್ಟು ಸಾಮಗ್ರಿ ಹಾಕಿ 1.5 ಲಕ್ಷ ಲಾಡುಗಳನ್ನು ತಯಾರಿಸುತ್ತಾರೆ. ಇದರಿಂದಲೇ ಲಾಡೂಗೆ ಆ ವಿಶಿಷ್ಟ ಟೇಸ್ಟ್ ಬರುತ್ತದೆ ಎಂದು ನೀವು ಭಾವಿಸಿದ್ದರೆ ತಿರುಪತಿ ತಿಮ್ಮಪ್ಪನ ಆಣೆ ತಪ್ಪು. ಏಕೆಂದರೆ ತಮ್ಮ ತಂದೆಯವರ ಕಾಲದಿಂದ ಇಲ್ಲಿ ಲಡ್ಡೂ ತಯಾರಿಸುತ್ತಿರುವ ಲಡ್ಡೂ ರಮೇಶ್ ಹೇಳುವ ಪ್ರಕಾರ ಮಂದಿರದಲ್ಲೇ ತಯಾರಾಗುವ ಈ ಲಡ್ಡೂಗೆ ದೇವರ ಆಶೀರ್ವಾದ ಇರುವುದರಿಂದಲೇ ಆ ರುಚಿ ಬಂದಿದೆ. ಇದೇ ಸಾಮಗ್ರಿ ಬಳಸಿ ಇದೇ ಲಾಡೂ ತಯಾರಕರು ಮನೆಗೆ ಬಂದು ಮಾಡಿದರೆ ಈ ರುಚಿ ಇರದು ಎಂದು ಅವರ ಅಂಬೋಣ. ಅದೇನೇ ಇರಲಿ ಈ ಲಾಡೂ ಇಷ್ಟೇ ಸ್ವಾದಿಷ್ಟವಾಗಿದ್ದರೆ ಸಾಕು.